ಶ್ರೀ ಆರಗ ಜ್ಞಾನೇಂದ್ರ:- ನಮ್ಮ ನಾಯಕರು ಮಾತನಾಡುವ ಸಮಯ ತೆಗೆದುಕೊಂಡು ಹಿಂದಿನ ವಿರೋಧಪಕ್ಷದ ನಾಯಕರು ಮಾತನಾಡಲು ತೆಗೆದುಕೊಳ್ಳುತ್ತಿದ್ದ ಸಮಯವನ್ನು ಗಣನೆಗೆ ತೆಗೆದುಕೊಂಡರೆ ನಮ್ಮ ನಾಯಕರು ಬಹಳ ಕಡಿಮೆ ಅವಧಿಯನ್ನು ತೆಗೆದುಕೊಳ್ಳುತ್ತಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

3. ನಿಲುವಳಿ ಸೂಚನೆ

(ಮಂಡನೆಗೆ ಅನುಮತಿ ಕೋರಿಕೆ)

ವಿಷಯ:- ಬಸ್ ಪ್ರಯಾಣ ದರ ಹೆಚ್ಚಳದ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು ಹುಬ್ಬಳ್ಳಿ):- ಮಾನ್ಯ ಅಧ್ಯಕ್ಷರೆ, ಬಸ್ ದರ ಏರಿಕೆಯ ಬಗ್ಗೆ ನಾವು ಕೊಟ್ಟಿದ್ದ ನಿಲುವಳಿ ಸೂಚನೆಯ ಚರ್ಚೆಗೆ ತಾವು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ತಾವು ವಿಷಯವನ್ನು ಸಂಕ್ಷಿಪ್ತವಾಗಿ ಮಂಡನೆ ಮಾಡಬೇಕೆಂದು ಹೇಳಿದ್ದೀರಿ.

ಅಧ್ಯಕ್ಷರು:- ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ನಾನು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಕಳೆದ ತಿಂಗಳು ಸದನ ದಿ:25-10-99ರಿಂದ ದಿ:30-10-99ರವರೆಗೂ ನಡೆಯಿತು. ಆಗ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ನಡೆಯಿತು. ಮತ್ತೆ ಸದನವನ್ನು ದಿ:11-11-99 ಮತ್ತು ದಿ:12-11-99ರಂದು ನಡೆಸಬೇಕೆಂದು ಆಯಿತು. ಸದನವನ್ನು ಅನಿರ್ದಿಷ್ಟವಾಗಿ ಸದನವನ್ನು ಮುಂದೂಡಿಲ್ಲ, ಇದು ಕಂಟಿನ್ಯೂಯಿಂಗ್ ಪ್ರೊಸೆಸ್‌ನಲ್ಲಿ ಇದೆ, ಅಂದಮೇಲೆ ಇವತ್ತು ಯಾವುದೇ ಒಂದು ಪಾಲಿಸಿ ಡಿಸಿಷನ್ ಇರಬಹುದು, ಅಥವಾ ಯಾವುದೇ ಒಂದು ವಿಷಯದ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವಂತಹ ಸದರ್ಭದಲ್ಲಿ ಸರ್ಕಾರ ಸದನ ನಡೆಯುವಂತಹ ಸಂದರ್ಭದಲ್ಲಿ ಇಂತಹ ಮಹತ್ವವಾದಂತಹ ವಿಚಾರವನ್ನು ಈ ಸದನದ ಮುಂದೆ ತಂದು ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಇಲ್ಲಿ ಸರ್ಕಾರ ಮೊದಲ ಹೆಜ್ಜೆಯಲ್ಲೇ ತಪ್ಪಿದೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ. ಸದನ ನಡೆಯುತ್ತಿರುವಂತಹ ಸಂದರ್ಭದಲ್ಲಿ ವಿರೋಧಪಕ್ಷದವರಿಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶವನ್ನು ಕೊಟ್ಟು, ಅವರ ವಿಶ್ವಾಸವನ್ನು ತೆಗೆದುಕೊಂಡು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಆ ರೀತಿಯಾಗಿ ಆಗಲಿಲ್ಲವೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಇವರು 3-11-99ರಂದು ಏಕಏಕಿಯಾಗಿ ಬಸ್ ಪ್ರಯಾಣ ದರವನ್ನು ಏರಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಈ ಬಸ್ ದರವನ್ನು ಮೂರು ಬಾರಿ ಏರಿಸಿದ್ದಾರೆ.

11.30 ಎ.ಎಂ

ಅಂದರೆ ದಿನಾಂಕ:1-8-1997ರಲ್ಲಿ ಶೇ.25ರಿಂದ ಶೇ.65ರವರೆಗೆ ಈ ಬಸ್ ಪ್ರಯಾಣ ದರವನ್ನು ಏರಿಸಿದ್ದರು. ಮತ್ತೊಮ್ಮೆ 21-9-97ರಲ್ಲಿ ಎರಡನೇ ಬಾರಿ ಶೇಕಡ 10-50ರವರೆಗೆ ದರವನ್ನು ಏರಿಸಲಾಯಿತು. ಮತ್ತೆ 3-11-99ರಂದು ಶೇಕಡ 25-40ರವರೆಗೆ ದರವನ್ನು ಹೆಚ್ಚಿಸಿದ್ದಾರೆ. ಸರ್ಕಾರ ಬಸ್ ದರವನ್ನು ಶೇಕಡ 20ರಷ್ಟು ಮಾತ್ರ ಹೆಚ್ಚಿಸುತ್ತೇವೆ ಎಂದು ಹೇಳಿದರೂ ಕೂಡ, ಅದನ್ನು ನಾವು ಆಮೂಲಾಗ್ರವಾಗಿ ನೋಡಿದರೆ ಶೇಕಡ 25-40ರವರೆಗೆ ಈ ಒಂದು ದರವನ್ನು ಹೆಚ್ಚಿಸಿದ್ದು ನಮಗೆ ಕಂಡುಬರುತ್ತದೆ. ಇದಕ್ಕೆ ಪ್ರಮುಖವಾಗಿ ಸರ್ಕಾರ ಕೊಡುವ ಕಾರಣವೇನೆಂದರೆ, ಕೇಂದ್ರ ಸರ್ಕಾರ ಡೀಸೆಲ್ ಬೆಲೆಯನ್ನು ಏರಿಸಿದ್ದು; ಆ ಕಾರಣದಿಂದ ಅನಿವಾರ್ಯ ಪ್ರಸಂಗದಿಂದ ಬಸ್ ದರವನ್ನು ಏರಿಸುವ ಸಂದರ್ಭ ಬಂತು ಎಂದು ಇವತ್ತು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಮಾನ್ಯ ಸಾರಿಗೆ ಸಚಿವರಾಗಲಿ ಕಾರಣವನ್ನು ಕೊಡುತ್ತಾರೆ. ಆದರೆ, ಇವತ್ತು ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರ ಏರಿಸಿದ್ದಕ್ಕೆ ಇದ್ದ ಸಂದರ್ಭ, ಆ ಏರಿಕೆಯಿಂದಾಗಿ ನಮ್ಮ ಸಾರಿಗೆ ಸಂಸ್ಥೆ ಡೀಸೆಲ್ ಸಲುವಾಗಿ ಖರ್ಚು ಮಾಡುವ ಹಣ ಇದನ್ನು ನಾವು ತುಲನೆ ಮಾಡಿ ನೋಡಿದರೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಸರಿಯೋ ಅಥವಾ ತಪ್ಪೋ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಬಸ್ ದರ ಏರಿಕೆಯ ಕ್ರಮ ಅನಿವಾರ್ಯವೆನ್ನುವ ಮಾತನ್ನು ಹೇಳುತ್ತಿದೆ. ನಮ್ಮ ಮಾನ್ಯ ಸಾರಿಗೆ ಸಚಿವರು ಹೇಳುವ ಪ್ರಕಾರ ಡೀಸೆಲ್ ಬೆಲೆ ಏರಿಕೆಯ ಕಾರಣ 110 ಕೋಟಿ ರೂ.ಗಳ ಹೆಚ್ಚುವರಿ ವೆಚ್ಚ ಸಾರಿಗೆ ಸಂಸ್ಥೆಯ ಮೇಲೆ ಹೊರೆ ಬೀಳುತ್ತದೆ. ಆದರೆ ನಾವು ಪ್ರತಿಯೊಂದನ್ನು ಕೂಲಂಕುಷವಾಗಿ ವಿಚಾರ ಮಾಡಿ ನೋಡಿದಾಗ, ಅವರು ಮಾಡಿರುವ ದರ ಏರಿಕೆಯಿಂದ ಇವತ್ತು 250 ಕೋಟಿ ರೂ.ಗಳು ಹೆಚ್ಚಿಗೆ ಆದಾಯ ಬರುವಂತೆ ಕ್ರಮ ಕೈಗೊಂಡಿದ್ದಾರೆ. ಇದು ಸರಿಯೋ ಅಥವಾ ತಪ್ಪೋ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ನಾವು ಇಲ್ಲಿಯವರೆಗೆ ಸರ್ಕಾರದ ಪರಿಸ್ಥಿತಿಯನ್ನು ನೋಡಿದರೆ ಹಿಂದೆ ಬಸ್ ದರ ಏರಿಕೆಯಿಂದ ಶೇಕಡ 21 ರಷ್ಟು ಆದಾಯ ಬರುತ್ತದೆಂದು ಹೇಳಿದ್ದರು, ಅಂದರೆ 180 ಕೋಟಿ ರೂ. ಆದಾಯ ಬರುತ್ತದೆಂದು ಹೇಳಿದ್ದರು. ಅಂದರೆ 180 ಕೋಟಿ ರೂ. ಆದಾಯ ಬರುತ್ತದೆಂದು ಹೇಳಿದ್ದರು. ಆದರೆ ಆವಾಗ ಶೇಕಡ 15ರಷ್ಟು ಮಾತ್ರ ಆದಾಯ ಬಂತು. ನಂತರ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಸಾರಿಗೆ ಮಂತ್ರಿಗಳಾದ ಸಂದರ್ಭದಲ್ಲಿ ಅವರು ಪ್ರಾಮಾಣಿಕತೆ ಹಾಗೂ ದಕ್ಷತೆಯಿಂದ ಈ ಒಂದು ಸಂಸ್ಥೆಯಲ್ಲಿ ಏನು ಸೋರಿಕೆಯಾಗುತ್ತಿತ್ತು ಅದನ್ನು ತಡೆಯಲು ಅವರು ಬಹಳಷ್ಟು ಪ್ರಯತ್ನವನ್ನು ಮಾಡಿದರು. ಆದರೆ ಅವರು ಅದರಲ್ಲಿ ಸಂಪೂರ್ಣವಾಗಿ ಯಶಸ್ವಿಯಾದರೆಂದು ಹೇಳುವುದಕ್ಕಾಗುವುದಿಲ್ಲ. ಅದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದರೂ ಕೂಡ ಈ ಸಂಸ್ಥೆ ನಿರಂತರವಾಗಿ ಏನು ನಷ್ಟದ ಒಂದು ಸಂಸ್ಥೆಯಾಗಿದೆ, ಆ ನಷ್ಟವನ್ನು ಪೂರ್ಣವಾಗಿ ತಡೆದು ಲಾಭ ಬರುವಂತೆ ಮಾಡುವುದಕ್ಕೆ ಎಷ್ಟೋ ಪ್ರಯತ್ನ ಮಾಡಿದರೂ ಕೂಡ ಅವರಿಗೂ

ಸಾಧ್ಯವಾಗಲಿಲ್ಲ. ಅವರು ಈ ಸಾರಿಗೆ ಸಂಸ್ಥೆಯನ್ನು ಬೆಂಗಳೂರು ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂ ಕರ್ನಾಟಕ ವಾಯುವ್ಯ ಸಾರಿಗೆ ಸಂಸ್ಥೆಯಾಗಿ ಮೂರು ವಿಭಾಗ ಮಾಡಿದರು. ಈ ರೀತಿ ಆಡಳಿತ ಸರಿಯಾದ ದಿಕ್ಕಿನಲ್ಲಿ ನಡೆಯಬೇಕು, ಸೋರಿಕೆಯನ್ನು ತಡೆಯಬೇಕೆಂದು ಅದನ್ನು ಅವರು ಮಾಡಿದರು ಕೂಡ ಸಾರಿಗೆ ಸಂಸ್ಥೆ ಮತ್ತೆ ನಷ್ಟದಲ್ಲಿ ನಡೆಯುತ್ತಿದೆ. 1990-98ನೇ ಸಾಲಿನಲ್ಲಿ 2,000 ಹೊಸ ಬಸ್‌ಗಳನ್ನು ಖರೀದಿ ಮಾಡಿದರು. ಇದನ್ನು ಖರೀದಿ ಮಾಡುವುದಕ್ಕೆ ಮುಂಚೆ 9663 ಮಾರ್ಗದಲ್ಲಿ ಸಾರಿಗೆ ಸಂಸ್ಥೆ ಬಸ್‌ಗಳು ಸಂಚಾರ ಮಾಡುತ್ತಿತ್ತು. ಈ 2000 ಬಸ್‌ಗಳನ್ನು ಖರೀದಿ ಮಾಡಿದ ನಂತರ ಕೇವಲ 251 ಮಾರ್ಗಗಳಲ್ಲಿ ಹೊಸ ಬಸ್‌ಗಳು ಬಂದವು, ಉಳಿದವನ್ನು ಹಳೆಯ ಬಸ್‌ಗಳ ಸ್ಥಾನಗಳಲ್ಲಿ ಬಳಸಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ನನಗೆ ಒಂದು ವಿಚಾರ ಅರ್ಥವಾಗಲಿಲ್ಲ, ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಿರೋ ಅಥವಾ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಿರೋ? ಪ್ರಿಲಿಮಿನರಿ ಸಬ್‌ಮಿಷನ್ ಇದಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಆದರೆ ನಾವು ಇದರ ಹಿನ್ನೆಲೆಯನ್ನು ಸ್ವಲ್ಪ ಹೇಳಬೇಕಾಗುತ್ತದೆ.

ಅಧ್ಯಕ್ಷರು:- ನೀವು ಕೆಎಸ್‌ಆರ್‌ಟಿಸಿ ಯ ಬಗ್ಗೆ ವಿವರವಾಗಿ ಹೇಳುತ್ತಿದ್ದೀರಿ, ತಾವು ಅಡ್ಮಿಟ್ ಮಾಡಿದ ಮೇಲೆ ವಿವರವಾಗಿ ತಾನು ಹೇಳಬಹುದು, ಈ ಹಂತದಲ್ಲಿ ದೀರ್ಘವಾಗಿ ಹೇಳುವಂತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇವತ್ತು ನಾವು ಕನ್ವಿನ್ಸ್ ಮಾಡುವ ಸಲುವಾಗಿ, ದರ ಏರಿಸುವ ಅವಶ್ಯಕತೆ ಇತ್ತೇ ಎಂದು ಅದರ ಹಿನ್ನೆಲೆಯನ್ನು ಸ್ವಲ್ಪ ಹೇಳಬೇಕಾಗುತ್ತದೆ.

ಅಧ್ಯಕ್ಷರು:- ತಾವು ಅವಕಾಶ ಕೊಟ್ಟರೆ ಮೂರು ಗಂಟೆಗಳ ಕಾಲ ಬೇಕಾದರೆ ಮಾತನಾಡ ಬಲ್ಲಿರಿ, ಆದರೆ ಇಲ್ಲಿ ಸಾಧ್ಯವಾಗಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ನಾವು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ ಸಂದರ್ಭದಲ್ಲಿ, ತಮಗೆ ಮನವರಿಕೆ ಮಾಡಿಕೊಡುವ ಸಂದರ್ಭದಲ್ಲಿ ನಾವು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಲೇ ಬೇಕಾಗುತ್ತದೆ, ತಾವು ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕು, ನಾನು ಕೆಲವೊಂದು ವಿಷಯಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು:- ಇದರ ಮೇಲೆ ಮಾತನಾಡುವವರು ಇನ್ನೂ ಮೂರ್‍ನಾಲ್ಕು ಜನರಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಹಿಂದೆ ನಿಲುವಳಿ ಸೂಚನೆಯ ಮಂಡನೆಗೆ ಇನ್ನು ಅವಕಾಶವಿಲ್ಲದಂತಹ ಸಂದರ್ಭದಲ್ಲಿ ಅದರ ಬಗ್ಗೆ ಎರಡು-ಮೂರು ಗಂಟೆಗಳ ಕಾಲ ಮಾತನಾಡಿದ ಸಂದರ್ಭಗಳನ್ನು ನಾವು ನೋಡಿದ್ದೇವೆ, ಹಾಗೆ ಸಂಪ್ರದಾಯವು ಇದೆ, ಆದರೆ ನಾನು ಅಷ್ಟೊಂದು ಸಮಯವನ್ನು ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು:- ಹಿಂದೆ ಆಗಿರುವುದನ್ನು ಈಗ ನಾವು ಇಲ್ಲಿ ಮೆಲುಕು ಹಾಕಬೇಡ, ಈಗ ಏನಾಗಿದೆ ಅದನ್ನು ನೋಡೋಣ ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ನಾನು ಅಷ್ಟೊಂದು ವೇಳೆಯನ್ನು ತೆಗೆದುಕೊಳ್ಳುತ್ತಿಲ್ಲ, ಕೆಲವೊಂದು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡಿ. ಇವತ್ತು ಸಾರಿಗೆ ಸಂಸ್ಥೆ ಸರ್ಕಾರದಿಂದ ಎಷ್ಟೋ ಸಹಾಯಧನ ಹಾಗೂ ಸೌಲಭ್ಯಗಳನ್ನು ಪಡೆದುಕೊಂಡಿದೆ. ಇವತ್ತು ಕೇವಲ ಕೇಂದ್ರ ಸರ್ಕಾರ ಡೀಸೆಲ್ ಬೆಲೆ ಏರಿಸಿದೆ ಅದಕ್ಕೆ ನಾವು ಬಸ್ ದರವನ್ನು ಏರಿಸುತ್ತೇವೆಂದು ಹೇಳುವ ವಾದವೇನಿದೆ ಇದು ಕೇವಲ ತೋರಿಕೆಯ ವಾದ; ನಿಜವಾದ ಪರಿಸ್ಥಿತಿ ಏನು ಎನ್ನುವುದನ್ನು ಕೂಡ ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಸರ್ಕಾರ ಪ್ರತಿವರ್ಷವು 200-300 ಕೋಟಿ ರೂಪಾಯಿಗಳವರೆಗೆ ಆ ಸಂಸ್ಥೆಗೆ ಸಹಾಯಧನ ನೀಡುತ್ತಿದೆ. ಆದರೂ ಕೂಡ ಇವತ್ತು ಆ ಸೋರಿಕೆ ತಪ್ಪಿಲ್ಲ. ಡೀಸೆಲ್ ಬೆಲೆ ಏರಿಕೆಯಿಂದ ಈ ಸಂಸ್ಥೆಗೆ 110 ಕೋಟಿ ರೂಪಾಯಿಗಳ ಹೆಚ್ಚು ಭಾರವಾಗುತ್ತದೆಂದು ಬಸ್ ದರ ಏರಿಕೆಯ ನಿರ್ಧಾರವನ್ನು ಮಾಡುವ ಈ ಸರ್ಕಾರ, ಈ ಸಂಸ್ಥೆಗೆ ಎಷ್ಟೆಷ್ಟು ಧನ ಸಹಾಯವನ್ನು ನೀಡಿದೆ ಎನ್ನುವುದನ್ನು ಕೂಡ ನೋಡೋಣ. 1995-96ರಲ್ಲಿ 242 ಕೋಟಿ ರೂ.ಗಳನ್ನು ಕೊಟ್ಟಿದ್ದರೆ 1996-97ರಲ್ಲಿ 243 ಕೋಟಿ ರೂ.ಗಳನ್ನು 1992-93ರಲ್ಲಿ 334 ಕೋಟಿ ರೂಪಾಯಿಗಳ ಸಹಾಯ ಧನವನ್ನು ಕೊಡಲಾಗಿದೆ. ಆದರೂ ಕೂಡ ಆ ರೀತಿಯ ಬೆಲೆ ಏರಿಕೆಯಿಂದ, ಮತ್ತು ಸರ್ಕಾರ ನೀಡುತ್ತಿರುವ ಸಹಾಯ ಧನದಿಂದ ಆ ಸಂಸ್ಥೆಯನ್ನು ಲಾಭದಲ್ಲಿ ನಡೆಸುವುದಕ್ಕಾಗುತ್ತಿಲ್ಲ. ಆದುದರಿಂದ ನಾವು ಈ ಕಾರಣದ ಹಿನ್ನೆಲೆಯಲ್ಲಿ ಅವಲೋಕನ ಮಾಡಬೇಕಾಗುತ್ತದೆ. ಬಸ್‌ಗಳ ನಿರ್ವಹಣೆ ಮತ್ತು ಇನ್ನಿತರ ಕಾರಣಗಳಿಂದ ಆ ಸಂಸ್ಥೆಯಲ್ಲಿ ಸಾಕಷ್ಟು ಸೋರಿಕೆ ಇದೆ,ಭ್ರಷ್ಟಾಚಾರ ಹೆಚ್ಚಾಗುತ್ತಿದೆ, ಅದನ್ನು ತಡೆಹಿಡಿಯುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಅದ್ಯಾವುದೇ ಕ್ರಮವನ್ನು ಕೈಗೊಳ್ಳದೆ, ಕೇವಲ ಡೀಸೆಲ್ ಬೆಲೆ ಏರಿಕೆಯ ಕಾರಣ ಬಸ್ ದರವನ್ನು ಹೆಚ್ಚಿಸುತ್ತೇವೆ ಎಂದು ಸರ್ಕಾರ ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇವತ್ತು ಕೆಲವೊಂದು ಕಡೆ ಬಸ್ ಸಂಚಾರವನ್ನು ರದ್ದು ಮಾಡಿಸುತ್ತಾರೆ. ಅಸಮರ್ಪಕ ನಿರ್ವಹಣೆ ಮಾಡುತ್ತಿದ್ದಾರೆ, ಪ್ರಯಾಣ ಚೀಟಿಯನ್ನು ಕೊಡುವಾಗ ಸೋರಿಕೆ ಯಾಗುತ್ತಿದೆ, ದೋಷಪೂರಿತ ಬಿಡಿ ಭಾಗಗಳ ಖರೀದಿಯಿಂದಾಗಿ ಸೋರಿಕೆಯಾಗುತ್ತಿದೆ, ಟೈರು, ಟ್ಯೂಬು, ಬಿಡಿಭಾಗಗಳ ಖರೀದಿಯಲ್ಲಿ

ಆಗುವ ಅವ್ಯವಹಾರವನ್ನು ತಡೆಯಲಿಲ್ಲ, ಎಷ್ಟೋ ಅವ್ಯವಹಾರಗಳು ಹೊರಗೆ ಬಂದಿವೆ, ಅವುಗಳ ಬಗ್ಗೆ ತನಿಖೆಯಾಗಿಲ್ಲ; ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ, ಈ ರೀತಿ ಹಲವಾರು ಕಾರಣಗಳಿಂದ ಇವತ್ತು ಸೋರಿಕೆಯಾಗುತ್ತಿದೆ. ಅದನ್ನು ತಡೆಹಿಡಿಯುವುದಕ್ಕೆ ಸರ್ಕಾರ ಇವತ್ತು ಏನು ಕ್ರಮ ಕೈಗೊಂಡಿದೆ? ನಮಗೆ ಡೀಸೆಲ್ ಬೆಲೆ ಏರಿಕೆಯಿಂದ 110 ಕೋಟಿ ರೂಪಾಯಿಗಳ ಹೊರೆಯಾಗುತ್ತಿದೆ, ಅದಕ್ಕೆ ಬಸ್ ದರವನ್ನು ಹೆಚ್ಚಿಸುತ್ತಿದ್ದೇವೆ ಎನ್ನುವುದು ಸರಿಯಲ್ಲ. ನಾನು ಈ ವಿಷಯದಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಇವತ್ತು ಬೆಂಗಳೂರು-ಮಂಗಳೂರಿಗೆ 360 ಕಿ.ಮೀ. ಇದೆ, ಬಸ್ ಸಂಚರಿಸಲು 72 ಲೀಟರ್ ಡೀಸೆಲ್ ಬೇಕಾಗುತ್ತದೆ, ಮೊದಲಿನ ಬೆಲೆ ಒಂದು ಲೀಟರ್ ಡೀಸೆಲ್‌ಗೆ 12ರೂ. 5 ಪೈಸೆ ಇತ್ತು, ಅದಕ್ಕಾಗಿ 267 ರೂಪಾಯಿ ಗಳನ್ನು ವೆಚ್ಚ ಮಾಡುತ್ತಿದ್ದೆವು. ಈಗಿನ ಬೆಲೆಯ ಪ್ರಕಾರ ಒಂದು ಲೀಟರ್ ಡೀಸೆಲ್‌ಗೆ 16 ರೂಪಾಯಿ 16 ಪೈಸೆಗಳು, ರೂ. 1163-52 ಇವತ್ತು ಹೆಚ್ಚಿನ ಬರ್ಡನ್ ಆಗುತ್ತಿದೆ. ಹಿಂದಿನ ಹಾಗೂ ಈಗಿನ ಡೀಸೆಲ್ ಬೆಲೆಯನ್ನು ತುಲನೆ ಮಾಡಿದರೆ ರೂ. 295-92 ಹೆಚ್ಚಿನ ಹೊರೆ ಇವತ್ತು ಕೆಎಸ್‌ಆರ್‌ಟಿಸಿಯ ಮೇಲೆ ಬರುತ್ತದೆ. ಡೀಸೆಲ್ ಬೆಲೆ ಹೆಚ್ಚಾದ್ದರಿಂದ ಬೆಂಗಳೂರು-ಮಂಗಳೂರು ನಡುವೆ ಬಸ್ ದರ ರೂ.296 ಗಳು ಹೆಚ್ಚಾಯಿತು. ಮೊದಲು ಬೆಂಗಳೂರಿನಿಂದ ಮಂಗಳೂರಿಗೆ ಬಸ್ ಪ್ರಯಾಣ ದರ 135 ರೂಪಾಯಿಗಳು ಇತ್ತು. ಅದನ್ನು 157 ರೂಪಾಯಿಗಳು ಮಾಡಿದ್ದಾರೆ. ಅಂದರೆ 22 ರೂಪಾಯಿಗಳನ್ನು ವ್ಯತ್ಯಾಸವಾದ ಹಾಗೆ ಆಯಿತು. ಸರಾಸರಿ 30 ಜನ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆ ಎಂದುಕೊಂಡರೆ, 660 ರೂಪಾಯಿಗಳನ್ನು ಇವರು ಜಾಸ್ತಿ ಮಾಡಿದ ಹಾಗಾಗುತ್ತದೆ. ಆದರೆ ನಿಜವಾಗಿ ಏರಿಸಬೇಕಾಗಿದ್ದುದು 296 ರೂಪಾಯಿಗಳು ಡೀಸೆಲ್ ರೇಟ್ ಏರಿದೆ ಎಂದರೆ ಅದರಿಂದ 296 ರೂಪಾಯಿಗಳು ಹೆಚ್ಚಾಗುತ್ತದೆ. ಆದರೆ ಇವರು ಏರಿಸಿರುವ ಪ್ರಕಾರ 660 ರೂಪಾಯಿಗಳ ಆದಾಯ ಬರುತ್ತದೆ. ಅಂದರೆ ಇವರು ಜನರಿಂದ 364 ರೂಪಾಯಿಗಳನ್ನು ಜಾಸ್ತಿ ಕೇಳುತ್ತಿದ್ದಾರೆ. ಹುಬ್ಬಳ್ಳಿ, ಗುಲ್ಬರ್ಗ ಬೆಂಗಳೂರಿನಿಂದ 613 ಕಿ.ಮೀ. ಇದೆ. ಅದಕ್ಕೆ 125 ಲೀಟರ್ ಡೀಸಲ್ ಬೇಕು. ಅದಕ್ಕಾಗಿ ಮೊದಲು ವೆಚ್ಚ ಮಾಡುತ್ತಿದ್ದಂಥ ಹಣ 1506 ರೂಪಾಯಿಗಳು ಇವತ್ತು ಡೀಸಲ್ ರೇಟ್ ಹೆಚ್ಚಾದುದರಿಂದ ಡೀಸಲ್ ವೆಚ್ಚ 125X16.16 ಅಂದರೆ 2020 ರೂಪಾಯಿಗಳು ಆಗುತ್ತದೆ. ಅಂದರೆ 514 ರೂಪಾಯಿಗಳ ಹೆಚ್ಚಿಗೆ ಹೊರೆ ಬೀಳುತ್ತದೆ. ಮೊದಲಿನ ರೇಟಿಗೂ, ಈಗಿನ ರೇಟಿಗೂ ಕಂಪೇರ್ ಮಾಡಿದರೆ, ಪ್ರಯಾಣಿಕರ ದರ 241 ರೂಪಾಯಿಗಳು ಇದ್ದುದನ್ನು ಈಗ 280 ರೂಪಾಯಿಗಳು ನಿಂದು ಮಾಡಿದ್ದಾರೆ. ಅದರ ಪ್ರಕಾರ ಕ್ಯಾಲ್ಕುಲೇಷನ್ ಮಾಡಿದರೆ, ಡೀಸಲ್ ರೇಟ್ 514 ರೂಪಾಯಿಗಳು ಹೆಚ್ಚಿಗೆ ಆಗಿದ್ದರೆ, ಸರ್ಕಾರದವರು ದರ ಏರಿಸಿರುವುದು 1170 ರೂಪಾಯಿಗಳು ಅಂದರೆ 650 ರೂಪಾಯಿಗಳಷ್ಟು ಹೆಚ್ಚಿಗೆ ಕೇಳುತ್ತಿದ್ದಾರೆ. ಡೀಸಲ್ ರೇಟ್ ಹೆಚ್ಚಾಗಿದ್ದಕ್ಕೆ, ಏರಿಸಿರುವ

ದರವನ್ನು ಕಂಪೇರ್ ಮಾಡಿದರೆ, ಇವರು 650 ರೂಪಾಯಿಗಳನ್ನು ಅಡಿಷನಲ್‌ಕ್ಲೈಂ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಈ ಎರಡು ಉದಾಹರಣೆಗಳು ಸಾಕು. ಅದೇ ರೀತಿ ಹೆಚ್ಚು ಮಾಡಿದ್ದಾರೆ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ಇದೇ ರೀತಿ ಬೇರೆ ಉದಾಹರಣೆಗಳನ್ನು ಕೊಡಬಹುದು. ಕೇಂದ್ರ ಸರ್ಕಾರ ಡೀಸಲ್ ರೇಟ್ ಏರಿಸಿದೆ, ಅದಕ್ಕಾಗಿ ನಾವು ಬೆಲೆ ಏರಿಸುತ್ತೇವೆ ಅನ್ನುವಂಥಾದ್ದನ್ನು, 110 ಕೋಟಿ ರೂಪಾಯಿಗಳಷ್ಟರ ಹೆಚ್ಚು ಹೊರೆಯಾಗುತ್ತದೆ ಎನ್ನುವಂಥಾದ್ದನ್ನು ಹೇಳುತ್ತಾರೆ. ಪೇಪರ್ ಸ್ಟೇಟ್‌ಮೆಂಟಿನಲ್ಲಿ ಶೇ. 20ರಷ್ಟು ಏರಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ನಿಜವಾಗಿ ಶೇ.25ರಿಂದ ಶೇ.40ರಷ್ಟು ದರವನ್ನು ಏರಿಸಿದ್ದಾರೆ. ಸಾರಿಗೆ ಸಂಸ್ಥೆಯ ಮೈನ್‌ಟೆನ್ಯಾನ್ಸ್‌ನಲ್ಲಿ ಡೀಸಲ್ ಸಲುವಾಗಿ ಇರುವ ಪೋರ್ಷನೆ ಎಷ್ಟು? ಶೇ.ಹದಿನೈದೋ, ಶೇ. ಇಪ್ಪತ್ತೋ ಅಥವಾ ಎಷ್ಟು? ಶೇ. 35ರಷ್ಟು ಡೀಸಲ್ ರೇಟ್‌ಏರಿಸುವುದರಿಂದ, ಪ್ರಯಾಣದ ದರವನ್ನೂ ಶೇ. 35ರಷ್ಟು ಏರಿಸಬೇಕೆಂಬ ನಿಯಮವಿದೆಯೇ? ಈ ರೀತಿಯಾಗಿ ಹೆಚ್ಚಿನ ಭಾರವನ್ನು ರಾಜ್ಯೋತ್ಸವದ ಈ ಸಂದರ್ಭದಲ್ಲಿ ಸರ್ಕಾರ ಕನ್ನಡ ನಾಡಿನ ಜನತೆಯ ಮೇಲೆ, ಬಡ ಪ್ರಯಾಣಿಕನ ಮೇಲೆ ಹೇರುತ್ತಿದೆ. ಅದು ಸಹ, ಸದನ ನಡೆಯುತ್ತಿರುವಂಥ ಸಂದರ್ಭದಲ್ಲಿ ವಿರೋಧ ಪಕ್ಷದವರ್ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮಾಡುತ್ತಿದೆ. ಈಗ ಇತರೆ ಎರಡು ದಿವಸ ಅಧಿವೇಶನ ಇದೆ. ಈ ಸದನದಲ್ಲಿ ಅದನ್ನು ಚರ್ಚೆ ಮಾಡಬಹುದಾಗಿತ್ತು. ಅದನ್ನು ಮಾಡದೇ ಅಥವಾ ಸಾರಿಗೆ ಸಂಸ್ಥೆಯಲ್ಲಿ ಏನು ಹಣ ಸೋರಿ ಹೋಗುತ್ತಿದೆ, ಏನು ಭ್ರಷ್ಟಾಚಾರ ನಡೆಯುತ್ತಿದೆ, ಏನು ಅವ್ಯವಹಾರ ನಡೆಯುತ್ತಿದೆ, ಅದನ್ನು ತಡೆಹಿಡಿಯದೇ ಕೇವಲ ಡೀಸಲ್ ರೇಟನ್ನು ಏರಿಸಿದ ನೆಪದ ಮೂಲಕ ಏಕಾಏಕೀ ಹೆಚ್ಚಿನ ಆದಾಯವನ್ನು ತೆಗೆದುಕೊಳ್ಳುತ್ತೇವೆ, ಜನತೆಯ ಮೇಲೆ ಹೆಚ್ಚಿನ ಭಾರವನ್ನು ಹೇರುತ್ತೇವೆ ಎನ್ನುವಂಥಾದ್ದು ಸರ್ಕಾರದ ತೀರ ತಪ್ಪು ನಡವಳಿಕೆ. ಅದಕ್ಕಾಗಿ ಸರ್ಕಾರ ಈ ಬಗ್ಗೆ ಜನರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಸರ್ಕಾರದ ಸರಿಯಾದ ದಾರಿಯಲ್ಲಿ ನಡೆಯಬೇಕಾಗುತ್ತದೆ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಏರಿಸಿರುವ ದರವನ್ನು ಇಳಿಸಿ, ಮೊದಲು ಇದ್ದ ಸ್ಥಿತಿಗೆ ತೆಗೆದುಕೊಂಡು ಬನ್ನಿ; ನಂತರ ಎಲ್ಲರೂ ಕೂಡಿ ವಿಚಾರ ಮಾಡೋಣ. ಹಿಂದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ, ಮಾನ್ಯ ಸಿಂಧ್ಯರವರು ಸಾರಿಗೆ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ, ಸರ್ಕಾರ ದಿಢೀರನೆ ಬೆಲೆ ಏರಿಕೆ ಮಾಡಿದಾಗ ಬೇಕಾದಷ್ಟು ಹೋರಾಟ ಮಾಡಿದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಸಂದರ್ಭದಲ್ಲಿ, ಸರ್ಕಾರ ಒಂದು ಸದನ ಸಮಿತಿಯನ್ನು ನೇಮಿಸಿ, ಅದರಲ್ಲಿನ ಎಲ್ಲ ಪಕ್ಷದವರೂ ಕೂಲಂಕುಷವಾಗಿ ವಿಚಾರ ಮಾಡಿ ಅದರ ಬಗ್ಗೆ ರೀಸನಬಲ್ ಆಗಿ ಒಂದು ನಿರ್ಣಯ

ಕೈಗೊಳ್ಳಬೇಕು ಎನ್ನುವ ಮಾತನ್ನು ಹೇಳಿರುವಂಥಾದ್ದೂ ಇದೆ ಮತ್ತು ಆಗ ಬೆಲೆಯನ್ನು ಇಳಿಸಿದಂಥ ವಿಚಾರವೂ ಇದೆ. ಅದಕ್ಕಾಗಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ವಿಚಾರ ಮಾಡಿ ಜನರಿಗೆ ಅನುಕೂಲವಾಗುವಂಥ ಒಂದು ನಿರ್ಣಯವನ್ನು ಕೈಗೊಳ್ಳಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಸರ್ಕಾರ ಪುನರ್ ಪರಿಶೀಲಿಸಬೇಕು, ಅದರಿಂದ ಹಿಂದೆ ಸರಿದು ಜನರಿಗೆ ಒಳಿತಾಗುವಂಥ ನಿರ್ಣಯವನ್ನು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೇ, ಅಧಿವೇಶನ ನಡೆಯತಕ್ಕಂಥ ಈ ಸಂದರ್ಭದಲ್ಲಿ ಸರ್ಕಾರ, ಕೇಂದ್ರ ಸರ್ಕಾರ ಡೀಸಲ್ ಬೆಲೆಯನ್ನು ಹೆಚ್ಚು ಮಾಡಿದೆ ಎಂದು ಹೇಳಿ ಬಸ್ ಪ್ರಯಾಣ ದರವನ್ನು ಹೆಚ್ಚು ಮಾಡಿರುವುದರಿಂದ ಈ ನಿಲುವಳಿ ಸೂಚನೆಯನ್ನು ನಾವು ತಂದಿದ್ದೇವೆ. ಕೇಂದ್ರ ಸರ್ಕಾರದವರು ಡೀಸಲ್ ಬೆಲೆಯನ್ನು ಬಹಳ ಜಾಸ್ತಿ ಮಾಡಿದ್ದಾರೆ. ಅದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಆಗ್ರಹವನ್ನು ಮಾಡಿದ್ದೇವೆ, ಡೀಸಲ್ ಬೆಲೆಯನ್ನು ಕಡಿಮೆ ಮಾಡಬೇಕು ಡೀಸಲ್ ಬೆಲೆಯನ್ನು ಜಾಸ್ತಿ ಮಾಡಿದ್ದರಿಂದ ಬಸ್ಸಿನ ರೇಟು ಜಾಸ್ತಿಯಾಗುತ್ತದೆ, ರೈತರಿಗೆ ಮತ್ತು ಸಾಮಾನ್ಯ ಜನಗಳಿಗೆ ಎಲ್ಲಾ ರೀತಿಯಾದಂಥ ತೊಂದರೆಯಾಗುತ್ತದೆ, ಇದನ್ನು ಕಡಿಮೆ ಮಾಡಬೇಕು ಎನ್ನುವ ಒತ್ತಾಯವನ್ನು ನಮ್ಮ ಪಕ್ಷದಿಂದ ಮಾಡಿದ್ದೇವೆ. ನಾವು ಸಹ ಕೇಂದ್ರ ಸರ್ಕಾರದಲ್ಲಿ ಸಹಭಾಗಿಗಳಾಗಿರುವುದರಿಂದ ಆ ರೀತಿ ಒತ್ತಾಯವನ್ನು ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೂ ಸಹ, ನಾನು ಪ್ರಧಾನಿಗಳಿಗೆ ಪತ್ರವನ್ನು ಬರೆದಿದ್ದೇನೆ, ಅವರು ಸಧ್ಯದಲ್ಲೇ ನನಗೆ ಉತ್ತರ ಬರೆಯುತ್ತಾರೆ, ಡೀಸಲ್ ಬೆಲೆಯನ್ನು ಕಡಿಮೆ ಮಾಡಿದ ಮೇಲೆ ಅಥವಾ ಕಡಿಮೆ ಮಾಡುವುದಿಲ್ಲ ಎಂದು ತಿಳಿಸಿದ ಮೇಲೆ ನಾನು ಪ್ರಯಾಣದ ಬೆಲೆಯನ್ನು ನಿರ್ಧಾರ ಮಾಡುತ್ತೇನೆ ಎಂದು ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದಾದ ನಂತರ ಮಾನ್ಯ ಪ್ರಧಾನಿಗಳಿಂದ ಅವರಿಗೆ ಉತ್ತರ ಬಂದಿದೆಯೋ ಇಲ್ಲವೋ ನಮಗಂತೂ ಗೊತ್ತಿಲ್ಲ. ಆದರೆ ಸಾರಿಗೆ ಸಂಸ್ಥೆಯವರು ಬಸ್ ದರವನ್ನು ಜಾಸ್ತಿ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡತಕ್ಕಂಥ ಈ ಸಂದರ್ಭದಲ್ಲಿ ಎರಡನೇ ದಿನ ಅಧಿವೇಶನವಿರುವುದರಿಂದ ಸಾರ್ವಜನಿಕ ಮಹತ್ವದ ದೃಷ್ಟಿಯಿಂದಾಗಿ ಈ ವಿಷಯವನ್ನು ನಾವು ಈ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿ, ಅದರ ಬಗ್ಗೆ ನಾಲ್ಕು ಮಾತುಗಳನ್ನಾಡಲು ನಮ್ಮ ಪಕ್ಷದಿಂದ ಬಯಸುತ್ತಿದ್ದೇವೆಯೋ ವಿನಃ ಯಾರ ಜೊತೆಯಲ್ಲೂ ಸ್ಪರ್ಧೆ ಮಾಡಬೇಕು ಎಂದಲ್ಲ. ಆಡಳಿತ ನಡೆಸತಕ್ಕಂಥ ಸಂದರ್ಭದಲ್ಲಿ ಅನೇಕ ಜವಾಬ್ದಾರಿಗಳು ಅವರ ಮೇಲೂ ಇರುತ್ತವೆ, ವಿರೋಧ ಪಕ್ಷದವರಾಗಿರತಕ್ಕಂಥ ನಮ್ಮ ಮೇಲೂ ಇರುತ್ತದೆ.

ಆವತ್ತೂ ಎರಡೂ ಸದನಗಳ ವಿರೋಧ ಪಕ್ಷದ ನಾಯಕರುಗಳಾಗಿದ್ದಂಥ ಶ್ರೀಮಾನ್ ಖರ್ಗೆಯವರು ಮತ್ತು ಶ್ರೀಮಾನ್ ಹೆಚ್.ಕೆ. ಪಾಟೀಲರು ಈಗ ಈ ಸದನದಲ್ಲಿ ಕುಳಿತಿರತಕ್ಕಂಥಾದ್ದು ನನಗೆ ಬಹಳ ಸಂತೋಷದ ವಿಷಯವಾಗಿದೆ. ಅಂದು ಅವರು ಹೇಳಿರತಕ್ಕಂಥ ಭಾಷಣಗಳನ್ನು ಮತ್ತೆ ನಾವು ಪುನರುಚ್ಚಾರ ಮಾಡತಕ್ಕಂಥಾದ್ದು ಅಷ್ಟೊಂದು ಯೋಗ್ಯವಾಗಿ ಕಾಣುವುದಿಲ್ಲ ಎಂದು ನಾನು ತಿಳಿಸಿದ್ದೇನೆ. ಅವರು ನಗುಮುಖದಿಂದಲೇ ಇದನ್ನು ಸ್ವಾಗತ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರು ಕರ್ನಾಟಕದಲ್ಲಿ ಅನೇಕ ಜನಪರವಾಗಿರತಕ್ಕಂಥ ಹೋರಾಟಗಳನ್ನು ಮಾಡಿ, ನಾವು ಅಧಿಕಾರಕ್ಕೆ ಬಂದಿದ್ದೇವೆ ಎನ್ನತಕ್ಕಂಥ ಮಾತನ್ನು ಅನೇಕ ಕಡೆಗಳಲ್ಲಿ ಮಾನ್ಯ ಖರ್ಗೆಯವರು ಮತ್ತು ಮಾನ್ಯ ಹೆಚ್.ಕೆ. ಪಾಟೀಲರು ಹೇಳಿದ್ದಾರೆ. ಹಿಂದಿನವರು ಬಸ್ ದರಗಳನ್ನು ಜಾಸ್ತಿ ಮಾಡಿದರು, ಎಲೆಕ್ಟ್ರಿಸಿಟಿ ದರವನ್ನು ಜಾಸ್ತಿ ಮಾಡಿದರು, ಮಾನ್ಯ ದೇವೇಗೌಡರ ಸರ್ಕಾರ ಬಂತು, ಮಾನ್ಯ ಪಟೇಲರ ಸರ್ಕಾರ ಬಂತು, ಅವರು ಜನಗಳನ್ನು ಲೂಟಿ ಮಾಡಿದರು, ರಿಸೋರ್ಸ್ ಮೊಬಲೈಸೇಷನ್ ಮಾಡಲು ಹೊರಟರು, ಮೂರು ಸಾವಿರ ಕೋಟಿ ರೂಪಾಯಿಗಳ ರಿಸೋರ್ಸ್ ಮೊಬಲೈಸೇಷನ್ ಆಯಿತು, ಇಂಡಿಯಾ ದೇಶದಲ್ಲಿ ಕರ್ನಾಟಕವೇ ಟ್ಯಾಕ್ಸ್ ರಿವಿಷನ್‌ನಲ್ಲಿ ಬಹಳ ಮುಂದಿರತಕ್ಕಂಥಾದ್ದು ಎನ್ನುವುದನ್ನು ಜನಗಳ ಕಿವಿಯಲ್ಲಿ ಹೇಳೀ, ಹೇಳೀ, ಒಂದು ಸುಳ್ಳನ್ನು ನೂರು ಸಾರಿ ಹೇಳುವುದರ ಮೂಲಕ, ಅದನ್ನು ಸತ್ಯ ಮಾಡಿ ನಂಬಿಸುವ ರೀತಿಯಲ್ಲಿ ಹೇಳಿ ಸುದ್ದಿ ಮಾಡಿದರು. ಈಗ ಅವರು ಆ ಭಾಷಣಗಳನ್ನು ನುಂಗತಕ್ಕಂಥ ಸಂದರ್ಭ ಬಂದಿದೆ ಎನ್ನುವುದನ್ನು ಅತಿ ವಿನಯದಿಂದ ತಮ್ಮಲ್ಲಿ ನಾನು ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಡಲು ಬಯಸುತ್ತೇನೆ. ಈ ಸದನದಲ್ಲಿರುವಂಥವರಲ್ಲಿ ಬಹಳಷ್ಟು ಜನ ಮಾಡಿ ಸಾರಿಗೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಕೆ.ಹೆಚ್. ರಂಗನಾಥರವರು ಸಾರಿಗೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಮಾನ್ಯ ಬಚ್ಚೇಗೌಡರು ಇದ್ದಾರೆ, ಬಹಳ ಜನರು ಇದ್ದಾರೆ. ನನ್ನ ಅಂದಾಜಿನ ಪ್ರಕಾರವಾಗಿ ಒಂದು ದಿವಸಕ್ಕೆ 11 ಸಾವಿರ ಬಸ್ಸುಗಳಿಂದ ಸುಮಾರು ಮೂರರಿಂದ ಮೂರೂವರೆ ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ. ಅಂದರೆ ಒಂದು ವರ್ಷಕ್ಕೆ ಸುಮಾರು 1150 ಕೋಟಿ ರೂಪಾಯಿಗಳಷ್ಟು ಟೋಟಲ್ ಟ್ರಾಫಿಕ್ ಕಲೆಕ್ಷನ್ ಆಗತಕ್ಕಂಥಾದ್ದು ಇದೆ; ಬಾಕಿ ಕಲೆಕ್ಷನ್‌ಗಳು ಆಮೇಲೆ ಇರಲಿ. ಈಗ ನಾನು ತಿಳಿದುಕೊಂಡಿರುವ ಮಾಹಿತಿಗಳ ಪ್ರಕಾರವಾಗಿ ಇವರು ಶೇ. 16ರಷ್ಟು ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆ. ಇದರಲ್ಲಿ ಎಕ್ಸ್‌ಪ್ರೆಸ್ ಮತ್ತು ಆರ್ಡಿನರಿ ಬಸ್ಸುಗಳು ಶೇ. 85 ರಿಂದ ಶೇ. 90ರವರೆಗೆ ಕವರೇಜ್ ಇರತಕ್ಕಂಥಾದ್ದು; ಇನ್ನುಳಿದ 10 ಪರ್ಸೆಂಟ್ ನಲ್ಲಿ ಲಕ್ಸುರಿ ಮತ್ತು ಸೆಮಿ. ಲಕ್ಸುರಿ ಬಸ್ಸುಗಳು ಬರುತ್ತವೆ. 1150 ಕೋಟಿ ರೂಪಾಯಿಗಳಲ್ಲಿ ಡೀಸಲ್ ಕಾಂಪೊನೆಂಟ್ ಇರತಕ್ಕಂಥಾದ್ದು 250 ಕೋಟಿ ರೂಪಾಯಿಗಳು ಅಷ್ಟೇ. ಇದರಲ್ಲಿ ಡೀಸಲ್ ಮತ್ತು ವೇಜಸ್ ಇವೆರಡೂ ಮುಖ್ಯವಾಗಿರತಕ್ಕಂಥ ಕಾಂಪೊನೆಂಟ್‌ಗಳು. ಈಗ ಕೇಂದ್ರ

ಸರ್ಕಾರದವರು ಡೀಸಲ್ ರೇಟನ್ನು ಏರಿಸಿರುವ ಕ್ರಮವೆಂದರೆ, ಒಂದು ಲೀಟರ್‌ಗೆ 4 ರೂಪಾಯಿ 6 ಪೈಸೆ ಜಾಸ್ತಿ ಮಾಡಿದ್ದಾರೆ. ಮೊದಲು 11.91 ರೂಪಾಯಿಗಳಷ್ಟು ಇತ್ತು. ಈಗ ಅದನ್ನು 15.97 ರೂಪಾಯಿಗಳಿಗೆ ಏರಿಸಿದ್ದಾರೆ. ಒಂದು ವರ್ಷಕ್ಕೆ 2.5 ಸಾವಿರ ಲೀಟರ್‌ನಷ್ಟು ಡೀಸಲ್ ಅನ್ನು ಕೆ.ಎಸ್.ಆರ್.ಟಿ.ಸಿ.ಯವರು ಖರ್ಚು ಮಾಡುತ್ತಾರೆ. ಅಂದರೆ ಹೆಚ್ಚಾಗಿರುವ ಈಗಿನ ದರದ ಪ್ರಕಾರ ಕೆ.ಎಸ್.ಆರ್.ಟಿ.ಸಿ. ಮೇಲೆ ಅಡಿಷನಲ್ ಬರ್ಡನ್ ಆಗತಕ್ಕಂಥಾದ್ದು 110 ಕೋಟಿ ರೂಪಾಯಿಗಳು ಇದು ಸತ್ಯಾಂಶ. ವೇಜ್ ರಿವಿಷನ್ ಅನ್ನು 1-1-2000ಕ್ಕೆ ಮಾಡಬೇಕು ಎಂದು ಕಾಣುತ್ತದೆ. ಹಿಂದಿನ ವರ್ಷಗಳಲ್ಲಿ ವೇಜ್ ರಿವಿಷನ್ ಕೊಟ್ಟಾಗ ಆಗಿರುವುದನ್ನು ಗಮನಿಸಿದರೆ ಹೆಚ್ಚಳ 40 ರಿಂದ 50 ಕೋಟಿ ರೂಪಾಯಿ ಆಗುತ್ತದೆ. ಅಂದರೆ ಒಟ್ಟು About 150 crores will be the additional requirement for KSRTC for the next one or two years. ಮತ್ತೇನಾದರೂ ಫ್ಲಕ್ಚುಯೇಟ್ ಆಗಿ ಆಯಿಲ್ ಮಾರ್ಕೆಟ್‌ನಲ್ಲಿ ಹೆಚ್ಚು ಕಡಿಮೆಯಾದರೆ ಇದನ್ನು ಮಾಡಬಹುದು. ನಾನು ಆ ಕಡೆ ಇದ್ದಾಗ ಒಂದು ರೀತಿಯಲ್ಲಿ ಮಾತನಾಡುವ, ಈ ಕಡೆ ನಿಂತುಕೊಂಡಾಗ ಒಂದು ರೀತಿಯಲ್ಲಿ ಮಾತನಾಡುವ, ಸ್ವಭಾವ ನನ್ನದಲ್ಲ. ಯಾರು ಈ ರೀತಿ ಮಾತನಾಡಲು ಆಗುವುದಿಲ್ಲ. ಕಳೆದ ಸಾರಿ ನಾವು ಏನು ಮಾಡಿದ್ದೆವು ಎಂದರೆ, ಸರ್ಕಾರದ ಅಡಿಷನಲ್ ಚೀಫ್ ಸೆಕ್ರೆಟರಿಯಾಗಿದ್ದಂಥ ಶ್ರೀ ವಿಶ್ವನಾಥರವರ ಅಧ್ಯಕ್ಷತೆಯಲ್ಲಿ ಒಂದು ಟ್ಯಾರಿಫ್ ಕಮಿಟಿಯನ್ನು ನಾವು ಮಾಡಿದ್ದೆವು. ರೈಲ್ವೆ ಬೋರ್ಡ್‌ನವರು ಯಾವ ರೀತಿ ಟ್ಯಾರಿಫ್ ಕಮಿಟಿ ಮಾಡುತ್ತಾರೆ, ಯಾವ ಯಾವ ಕಾಂಪೊನೆಂಟಿಗಳು ಬರುತ್ತವೆ ಆ ಕಾಂಪೊನೆಂಟ್‌ಗಳನ್ನೆಲ್ಲ ಲೆಕ್ಕಾಚಾರ ಮಾಡಿ ಅದರ ಕರೆಸ್ಪಂಡಿಂಗ್ ಆಗಿ ಅಫಿಷಿಯನ್ಸಿ ಯಾವ ರೀತಿಯಲ್ಲಿ ಹೆಚ್ಚಾಗಬೇಕೆಂದು ಹೇಳಿ ಶ್ರೀ ವಿಶ್ವನಾಥ್ ಎನ್ನುವ ಒಬ್ಬ ನಿವೃತ್ತ ಅಡಿಷನಲ್ ಚೀಫ್ ಸೆಕ್ರೆಟರಿಯ ಅಧ್ಯಕ್ಷತೆಯಲ್ಲಿ ಟೆಕ್ನಿಕಲ್ ಕಮಿಟಿ ಮೆಂಬರ್ಸ್‌ನ್ನು ಮಾಡಿ ಅದರಲ್ಲಿ ಎಪಿಎಸ್‌ಆರ್‌ಟಿಸಿ ಯಿಂದ ಒಬ್ಬ ಪ್ರತಿನಿಧಿಯನ್ನು ಈ ಬೋರ್ಡ್ ಮೆಂಬರನ್ನಾಗಿ ಮಾಡಿ ನಮ್ಮ ಕೆ.ಎಸ್.ಆರ್.ಟಿಸಿ.ಯಲ್ಲಿಯೇ ನಿವೃತ್ತಿಯಾಗಿರತಕ್ಕಂಥ ಅಧಿಕಾರಿಗಳಿಂದ ಒಂದು ಟ್ಯಾರಿಫ್ ಕಮಿಟಿ ಮಾಡಿದಾಗ ಅವರು ಬಸ್ ಟಿಕೆಟ್ ದರ ಹೆಚ್ಚಿಸುವ ಬಗ್ಗೆ ಒಂದು ರೆಕಮೆಂಡ್ ಮಾಡಿದರು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ತಿಂಗಳಾಗಿರುವುದರಿಂದ ಬಹುಶಃ ಈ ಸಲ ಸಮಯದ ಅಭಾವದಿಂದಾಗಿ ಟ್ಯಾರಿಫ್ ಕಮಿಟಿ ಮಾಡುವುದಕ್ಕಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಾರಿಗೆ ಸಂಸ್ಥೆಗೆ ಅಡ್ಮಿನಿಸ್ಟ್ರೇಷನ್‌ನ್ನು ಬಹಳ ಚೆನ್ನಾಗಿ ಮಾಡಬೇಕೆಂದು ಹೇಳಿ ಅದಕ್ಕೋಸ್ಕರ ಪ್ರಾಮಾಣಿಕನಾದ ಪ್ರಯತ್ನವನ್ನು ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಸಂತೋಷ ಪಡುತ್ತೇನೆ ಮತ್ತು ಇದನ್ನು ಸ್ವಾಗತ ಮಾಡುತ್ತೇನೆ. 1994-95ರಲ್ಲಿ ನಮ್ಮ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂತು. 1994-95ರಲ್ಲಿ ಕೆ.ಎಸ್.ಆರ್.ಟಿ.ಸಿ.

ಒಂದರಲ್ಲಿಯೇ 140 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿತ್ತು. 1995-96ರಲ್ಲಿ ಆ ನಷ್ಟ 40 ಕೋಟಿ ರೂಪಾಯಿಗಳಿಗೆ ಇಳಿಯಿತು. ಅದಾದನಂತರ ಮುಂದಿನ ವರ್ಷ 50 ಕೋಟಿ ರೂಪಾಯಿಗಳಿಗೆ ಇಳಿಯಿತು, ತದನಂತರ ವರ್ಷದಲ್ಲಿ 28 ಕೋಟಿ ರೂಪಾಯಿಗಳಿಗೆ ಇಳಿಯಿತು. ಕಳೆದ ಸಾರಿ ನಿಮ್ಮ ಸ್ಟಾಟಿಸ್ಟಿಕ್ಸ್ ಪ್ರಕಾರವಾಗಿ ಮೂರು ಕಾರ್ಪೊರೇಷನ್‌ಗಳಲಿ ನಷ್ಟ ಎಂದು ಎರಡು ಕೋಟಿ ರೂಪಾಯಿಗಳಿಗೆ ಇಳಿಯಿತು. From 150 crores it has come down to Rs. two crores. That was the state of affairs when Sri Bachegowda became Ex-Transport Minister. ನಾನು ಕಳೆದ ಸಾಲಿನ ಆರ್ಥಿಕ ವರ್ಷದ ಬಗ್ಗೆ ಮಾತನಾಡುತ್ತಿದ್ದೇನೆ. 150 ಕೋಟಿ ರೂಪಾಯಿಗಳ ನಷ್ಟದಿಂದ ಎರಡು ಕೋಟಿ ರೂಪಾಯಿಗಳಿಗೆ ಇಳಿದಿದೆ ಎಂದು ಹೇಳಿದ್ದೀರಿ. That means efficiency and administration had improved. ಒಂದು ಟ್ರಾನ್ಸಿಷನ್ ಪೀರಿಯಡ್ ಎಂದು ಇರುತ್ತದೆ. ನಾನು ಕೂಡ ಅದನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಇದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಹೇಳುವುದಾದರೆ ಕಳೆದ ಒಂದೂವರೆ ತಿಂಗಳಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಒಂದು ದಿನಕ್ಕೆ 35 ಕಿ.ಮೀಟರ್‌ಗಳಷ್ಟು ರೂಟ್ ಓಡಾಡುತ್ತವೆ. ಅದರಲ್ಲಿ cancellation-it was 5% and now it has increased to7.5%.. ಎಂದು ಹೇಳಿದರೆ ಒಂದು ದಿನಕ್ಕೆ ಎರಡೂವರೆ ಲಕ್ಷ ಕಿಲೋ-ಮೀಟರ್‌ಗಳಷ್ಟು ಬಸ್ಸುಗಳ ಓಡಾಟ ಕ್ಯಾನ್ಸಲೇಷನ್ ಆಗಿದೆ. Absentism has increased. How the administration has to be improved? You have to take care of all these things immediately. ಕ್ಯಾನ್ಸಲೇಷನ್ 5 ಪರ್ಸೆಂಟ್ ಇರತಕ್ಕಂಥದ್ದು 7.5 ಪರ್ಸೆಂಟ್‌ಗೆ ಏರಿದೆ ಎಂದರೆ ಒಂದು ದಿನಕ್ಕೆ ಎರಡೂವರೆ ಲಕ್ಷ ಕಿಲೋ-ಮೀಟರ್ ಕ್ಯಾನ್ಸಲೇಷನ್‌ಆಗಿದೆ ಎಂದರೆ ನಮಗೆ ಒಂದು ಕಿ.ಮೀ.ಗೆ 10 ರೂ. 40 ಪೈಸೆ ಲಾಭ ಬರುವಂತಿದ್ದರೆ ಕಳೆದ ಒಂದೂವರೆ ತಿಂಗಳಲ್ಲಿ ನಿಮಗೆ ದಿನವೊಂದಕ್ಕೆ 25 ಲಕ್ಷ ರೂಪಾಯಿಗಳ ಕಡಿಮೆ ಆದಾಯ ಆಗಿದೆ. ಇದರಿಂದಾಗಿ ಈ ಸಂದರ್ಭದಲ್ಲಿ ನಾನು ಎರಡು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಅದಕ್ಕೆ ಮೊದಲು ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಹಿತದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೆಂದು ನಾವು ತಮ್ಮಲ್ಲಿ ಬೇಡಿಕೊಳ್ಳುತ್ತಿದ್ದೇವೆ. ಇದರ ಬಗ್ಗೆ ಹೆಚ್ಚಿನ ವಿಚಾರಗಳನ್ನು ಹೇಳತಕ್ಕಂಥದ್ದು ಇದೆ. ದಯವಿಟ್ಟು ದೊಡ್ಡ ಮನಸ್ಸು ಮಾಡಿ ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟು ಅದರಲ್ಲಿ ಹೆಚ್ಚಿನ ಎಲ್ಲಾ ಮಾನ್ಯ ಸದಸ್ಯರು ಭಾಗವಹಿಸಲು ಅವಕಾಶ ಮಾಡಿ ಕೊಟ್ಟರೆ ಬಹಳ ಸಂತೋಷ ಮತ್ತು ಹಾಗೆ ಅವಕಾಶ ಮಾಡಿಕೊಡಬೇಕೆಂಬ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಾರಿಗೆ ಮಂತ್ರಿಗಳು ಹಾಗೂ ಅಧಿಕಾರಿ ವರ್ಗದವರ ಮೂಲಕವಾಗಿ ನಾನು ಎರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡಲು ಬಯಸುತ್ತೇನೆ. ಯಾವುದೇ

ಕಾರಣದಿಂದಲೂ ಸಹಿತ ಈ cancellation ಅನ್ನು you must bring it down to 3% if it if possible.

ಈ ರೀತಿ ಮಾಡದೇ ಇದ್ದರೆ Again it will go on increasing. ಮತ್ತು ಮೇಲ್ಗಡೆ ಇರತಕ್ಕಂಥ ಆಫೀಸರ್‌ಗಳು ವಿಧಿಯಿಲ್ಲದೆ ಪೇ-ರಿವಿಷನ್‌ಗೆ ಎಂದು ಒಂದು ವರ್ಷಕ್ಕೆ, ಎರಡು ವರ್ಷಕ್ಕೆ ದರ ಹೆಚ್ಚು ಮಾಡಬೇಕೆಂದು ಸರ್ಕಾರದ ಮುಂದೆ ತರುತ್ತಾರೆ. ಕೆಲಸಗಾರರ, ನೌಕರರ ಗೈರುಹಾಜರಿ ಜಾಸ್ತಿಯಾಗಿದೆ. I do not know for what reasons. .. .. ಆದ್ದರಿಂದ ಈ ಗೈರುಹಾಜರಿ ಜಾಸ್ತಿ ಆಗದಿರುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಇನ್ನು ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳು ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಬಹುಶಃ ಅವರಿಗೆ ಇನ್ನೂ ಸರಿಯಾದ ಸಮಯ ಸಿಕ್ಕಿಲ್ಲವೆಂದು ತೋರುತ್ತದೆ.

"ಸಾರಿಗೆ ನೀತಿಯ ಬಗ್ಗೆ ನಾನು ಸ್ವಲ್ಪ ಸಡಿಲಗೊಳಿಸುತ್ತೇನೆ, ಖಾಸಗಿಯವರಿಗೆ ಸಹಿತ ಅವಕಾಶವನ್ನು ಕೊಡುತ್ತೇನೆ" ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಎಷ್ಟರ ಮಟ್ಟಿಗೆ, ಯಾವ ರೀತಿ ಕೊಡುತ್ತೀರಿ ಎನ್ನುವುದರ ಬಗ್ಗೆ ಒಂದು ದಿನ ನಾವು ಚರ್ಚೆಯನ್ನು ಮಾಡೋಣ. It is very essential according to me. ಈ ಸಾರಿಗೆ ನೀತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಅಸ್ಪಷ್ಟವಾಗಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. One should have a clear-cut thinking ಇರಬೇಕು. ಡಿ-ನ್ಯಾಷನಲ್‌ಜಿ ಮಾಡಬೇಕೇ? ಡಿ-ನ್ಯಾಷನಲ್‌ಜಿ ಮಾಡುವುದಾದರೆ ರೂಟ್‌ವೈಸ್ ಮಾಡುವುದೇ, ಏರಿಯಾವೈಸ್ ಮಾಡಬೇಕೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. We have lot of private senior operators ಆಗಿರತಕ್ಕಂಥವರು ಕೆಲವರು ಈ ಸದನದ ಸದಸ್ಯರುಗಳಾಗಿದ್ದಾರೆ. ಅವರೂ ಕೂಡ ಅನೇಕ ಸಲಹೆಗಳನ್ನು ಕೊಡುತ್ತಾರೆ. ಇನ್ನು ಬಿ.ಎಂ.ಟಿ.ಸಿ.ಯಲ್ಲಿನ ಬಸ್ ಟಿಕೆಟ್‌ಗಳ ದರವನ್ನು ರೌಂಡ್‌ಆಫ್ ಮಾಡಿದ್ದಾರೆ. ಈ ರೌಂಡ್‌ಆಫ್ ಮಾಡಿರುವುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಟಿಕೆಟ್ ದರಗಳನ್ನು ರೌಂಡ್‌ಆಫ್ ಮಾಡುವುದು ಒಳ್ಳೆಯದು, ಚಿಲ್ಲರೆ ಇಲ್ಲದೇ ಹೋದರೆ ಸಾರ್ವಜನಿಕರಿಗೂ ತೊಂದರೆಯಾಗುತ್ತದೆ ಮತ್ತು ಎಂಪ್ಲಾಯಿಸ್‌ಗೂ ಹೆರಾಸ್‌ಮೆಂಟ್ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸಹಿತ ಹೇಳಿದ್ದೇನೆ. ಸಾರಿಗೆ ನೀತಿಯ ದೃಷ್ಟಿಯಿಂದಾಗಿ ಒಂದು ಸ್ಪಷ್ಟವಾದ ಸಾರಿಗೆ ನೀತಿಯನ್ನು ಪ್ರೈವೇಟ್‌ಸೆಕ್ಟಾರ್ ಮತ್ತು ಪಬ್ಲಿಕ್ ಸೆಕ್ಟಾರ್ ಎರಡರಲ್ಲೂ ಸಹಿತ ತೆಗೆದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಗಮನಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಹೇಳಿ, ಈಗ ತಾವು 17 ಪರ್ಸಂಟ್ ಏನು ಜಾಸ್ತಿ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ ಇದರಲ್ಲಿ ಆ್ಯಕ್ಚುಯಲ್ ರಿಯಲೈಜೇಷನ್ ಕೊನೆಯ ಪಕ್ಷ 75 ಪರ್ಸೆಂಟ್‌ನಿಂದ 80 ಪರ್ಸೆಂಟ್ ಆಗಬೇಕು. ಇದು ರಿಯಲೈಜೇಷನ್ ಆಗುವುದಿಲ್ಲ. ಅದರ ಕಡೆಗೆ ನೀವು ಕೂಡಲೆ ಗಮನಹರಿಸಬೇಕಾಗಿರುವಂಥದ್ದು ಆಗಬೇಕು.

ನಾನು ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಏನೆಂದರೆ ಕ್ಯಾನ್ಸಲೇಷನ್‌ನ್ನು ಕಡಿಮೆ ಮಾಡಬೇಕು, ಅಬ್ಸೆಂಟಿಸಮ್‌ನ್ನು ಕಡಿಮೆ ಮಾಡಬೇಕು, ರಿಯಲೈಜೇಷನ್‌ನ್ನು ಹೆಚ್ಚಿಗೆ ಮಾಡುವುದರ ಜೊತೆಗೆ ಈ ಸಾರಿಗೆ ನೀತಿಯ ಸ್ಪಷ್ಟವಾದ ಒಂದು ನಿರ್ಧಾರವನ್ನು ತೆಗೆದುಕೊಂಡು You kindly establish a permanent Tariff Committee. ಕಾಂಗ್ರೆಸ್ ಮೇನಿಫೆಸ್ಟೊದಲ್ಲಿ ಒಂದು ಅಂಶವನ್ನು ಗಮನಿಸಿ ನೋಡಿದಾಗ ನನಗೆ ಬಹಳ ಸಂತೋಷವಾಯಿತು. ಅದರಲ್ಲಿ ಪವರ್ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ನೀವು ತೆಗೆದುಕೊಳ್ಳತಕ್ಕಂಥ ದೃಷ್ಟಿಯಲ್ಲಿ ಒಂದು ಒಳ್ಳೆಯ ಮಾತನ್ನು ಹೇಳಿದ್ದೀರಿ. ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು- 'ಕಾವೇರಿ ನೀತಿಯ ಬಗ್ಗೆ ಪಟೇಲರ ಸರ್ಕಾರ ಇದ್ದಾಗ ಏನು ನೀತಿ ಇತ್ತೋ ಅದನ್ನೇ ನಾನು ಮುಂದುವರಿಸಿಕೊಂಡು ಹೋಗುತ್ತೇನೆ ' ಎನ್ನುವ ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯವನ್ನು ಮಾಡುವುದೇನೆಂದರೆ- Permanent Tariff Committee ಯನ್ನು ನೀವು ಎಸ್ಟಾಬ್ಲಿಷ್ ಮಾಡಬೇಕು. There should be a Permanent Tariff Committee ಈ ಟಾರಿಫ್ ಕಮಿಟಿಯನ್ನು ಮಾಡಿ ಒಬ್ಬ ಅಡಿಷನಲ್‌ಚೀಫ್ ಸೆಕ್ರೆಟರಿ ಲೆವೆಲ್ ಅಧಿಕಾರಿಯನ್ನು ಅದಕ್ಕೋಸ್ಕರ ನಿಯುಕ್ತಿ ಮಾಡಿ. ಅದರಲ್ಲಿ ಡೇ-ಟುಡೇ ವರ್ಕೇನೂ ಇರುವುದಿಲ್ಲ. ಇದರ ಕಾಂಪೊನೆಂಟ್ಸ್ ಏನು ಇದೆ, ಇನ್‌ಗ್ರೆಡಿಯೆಂಟ್ಸ್ ಏನು ಹೆಚ್ಚಾಗಿದೆ ಎಂದು ನೋಡುತ್ತಾರೆ. ಕೇಂದ್ರ ಸರ್ಕಾರ ಡೀಸೆಲ್ ಬೆಲೆಯನ್ನು ಜಾಸ್ತಿ ಮಾಡಿದೆ ಎನ್ನುವ ನೆಪದಲ್ಲಿ 180 ಕೋಟಿ ರೂಪಾಯಿಗಳನ್ನು ರಿಯಲೈಜೇಷನ್ ಮಾಡಿಕೊಳ್ಳತಕ್ಕಂಥ ಯೋಜನೆಯನ್ನು ಸರ್ಕಾರ ಏನು ಮಾಡಿದೆ, it may backfire. If you don't improve the efficiency of the Corporation, it may backfire. ಎಂದು ನಾನುಹೇಳುತ್ತೇನೆ. ನಾನು ಒತ್ತಾಯ ಮಾಡುವುದೇನೆಂದರೆ ಇದರಲ್ಲಿ ರಿಯಲೈಜೇಷನ್ ಆಗುವಂಥದ್ದರಲ್ಲಿ ಒಂದೊಂದು ಪೈಸೆಯನ್ನು ಕಡಿಮೆ ಮಾಡಬೇಕು. ಈ ಎಕ್ಸ್‌ಪ್ರೆಸ್ ಬಸ್ಸುಗಳಲ್ಲಿ ಕಿ.ಮಿ.ಒಂದಕ್ಕೆ 6 ಪೈಸೆ ಜಾಸ್ತಿ ಮಾಡಿದ್ದೀರಿ, ಅದರಲ್ಲಿ ಒಂದು ಪೈಸೆಯನ್ನು ಕಡಿಮೆ ಮಾಡಬೇಕು. Please don't compare to Andhre Pradesh, Maharashtra etc.

ನಾವೆಲ್ಲಾ ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇವೆ. 110 ಕೋಟಿ ರೂಪಾಯಿಗಳು ಡೀಸೆಲ್‌ಗೆ ಬೇಕಾದರೆ, ಮತ್ತೆ 1-1-2000 ಇಸವಿಯಲ್ಲಿ ವೇಜ್-ರಿವಿಜನ್ ಮಾಡಿದಾಗ ಅದಕ್ಕೆ 40ರಿಂದ 50 ಕೋಟಿ ರೂಪಾಯಿಗಳು ಬೇಕಾಗಬಹುದು. ಈ ವೇ-ರಿವಿಜನ್ ಮಾಡಿದಾಗ ಪುನಃ ಇನ್ನೊಂದು ಸಲ ಟಿಕೆಟ್ ದರ ಹೆಚ್ಚು ಮಾಡುವುದಕ್ಕೆ ಮುಂದೆ ಬರಬೇಡಿ. But, by this itself, you are going to release 180 crores.

ನಾನು ಒತ್ತಾಯ ಮಾಡುವುದೇನೆಂದರೆ ಎಕ್ಸ್‌ಪ್ರೆಸ್ ಬಸ್‌ನಲ್ಲಿ ಮತ್ತು ಆರ್ಡಿನರಿ ಬಸ್ಸುಗಳಲ್ಲಿ ಪರ್ ಕಿ.ಮೀ.ಗೆ ಒಂದು ಪೈಸೆಯಂತೆ ಕಡಿಮೆ ಮಾಡಿ. ಆರ್ಡಿನರಿ ಬಸ್ಸುಗಳು ಎಂದರೆ ಸಾಮಾನ್ಯವಾಗಿ ಹಳ್ಳಿಗಳಿಂದ ತಾಲ್ಲೂಕು ಪ್ಲೇಸ್‌ಗಳಿಗೆ ಬರತಕ್ಕಂಥವುಗಳು. ನಮ್ಮ ಸರ್ಕಾರ ಇದ್ದಾಗ ನೀವುಗಳು ಬಸ್ ಟಿಕೆಟ್ ದರ ಕಡಿಮೆ ಮಾಡಿ ಎಂದು ಕೇಳಿದಾಗ 4 ರಿಂದ 6 ಪೈಸೆ ವರೆಗೆ ಕಡಿಮೆ ಮಾಡಿದ್ದೆವು. ಕೊನೆಯ ಪಕ್ಷ ನಿಮ್ಮ ಸರ್ಕಾರ ಒಂದು ಪೈಸೆ ಆದರೂ ಕಡಿಮೆ ಮಾಡಲಿ, ಜನಗಳು ನಿಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿ, ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಟ್ಟರೆ ಇನ್ನೂ ಹೆಚ್ಚಿನ ವಿಚಾರಗಳನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ, ನಮ್ಮ ಪ್ರಿಲಿಮಿನರಿ ಸಬ್‌ಮಿಷನ್‌ಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದವನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ ಈಗಾಗಲೇ ನಮ್ಮ ನಾಯಕರಾದಂಥ ಮಾನ್ಯ ಸಿಂಧ್ಯಾರವರು ಅನೇಕ ವಿಚಾರಗಳನ್ನು ಹೇಳಿ ಏತಕ್ಕೋಸ್ಕರ ಈ ಒಂದು ನಿಲುವಳಿ ಸೂಚನೆಯನ್ನು ಕೈಗೊಳ್ಳಬೇಕು ಎನ್ನತಕ್ಕಂಥ ವಿಚಾರವನ್ನು ಸಮರ್ಥನೆ ಮಾಡಿ ಹೇಳಿದ್ದಾರೆ. ಕೇವಲ ಒಂದು ತಿಂಗಳ ಹಿಂದೆ ಹೊಸ ಸರ್ಕಾರ ರಚನೆಯಾಗಿದೆ. ಈ ಸರ್ಕಾರ ಏರಿಸಿರತಕ್ಕಂಥ ದರವನ್ನು ಕಡಿಮೆ ಮಾಡಲು ಪ್ರತಿಭಟನೆ ಮಾಡಬೇಕು, ವಿರೋಧ ಮಾಡಬೇಕು ಎನ್ನುವ ಉದ್ದೇಶದಿಂದ ನಾವೇನೂ ಈ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. ನಮಗೆ ಏನು ಎನಿಸಿದೆಯೆಂದರೆ-ಈ ಒಂದು ವಿಚಾರದಲ್ಲಿ ನಮ್ಮ ವಿಧಾನಸಭೆ ನಡೆಯುವಾಗ ಸರ್ಕಾರ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎನ್ನುವ ದೂರು ಇದೆ. ಆದರೆ ದರವನ್ನು ಹೆಚ್ಚಿಗೆ ಮಾಡಬಾರದು ಎಂದು ನಾವು ಹೇಳುವುದಿಲ್ಲ ಆದರೆ ಇದೇ ಒಂದು ನೆಪದಲ್ಲಿ ಇಷ್ಟೊಂದು ಹೆಚ್ಚಿಗೆ ದರವನ್ನು ಮಾಡಬಾರದಿತ್ತು. ಇಷ್ಟೊಂದು ದರವನ್ನು ಮಾಡಿರತಕ್ಕಂಥದ್ದು ಜಾಸ್ತಿಯಾಗಿದೆ ಅದನ್ನು ಕಡಿಮೆ ಮಾಡಬೇಕು ಎನ್ನುವುದು ನಮ್ಮೆಲ್ಲರ ಒತ್ತಾಯವಾಗಿದೆ. ಕೇಂದ್ರ ಸರ್ಕಾರದಲ್ಲಿ ಡೀಸೆಲ್ ಬೆಲೆ ಹೆಚ್ಚಿಸಿದ್ದಾರೆ ಎನ್ನುವ ಒಂದೇ ಒಂದು ನೆಪದಲ್ಲಿ ಇಷೊಂದು ಜಾಸ್ತಿ ದರವನ್ನು ಫಿಕ್ಸ್ ಮಾಡಿರುವುದು ಸರಿಯಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನೂ ಸಹ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡಬೇಕು ಮತ್ತು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎನ್ನುವ ಒಂದು ಪ್ರಮುಖ ಅಂಶ ಈಗಾಗಲೇ ಪ್ರಸ್ತಾಪವಾಗಿದೆ. ಆ ಸದನದ ಕಾರ್ಯಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೇರವಾಗಿ ತಮ್ಮ ಇಚ್ಛಾನುಸಾರ ದರವನ್ನು ಏರಿಸಿರುವುದು ಸದನದ ಹಕ್ಕುಚ್ಯುತಿಯಾಗುತ್ತದೆಂಬುದು ನನ್ನ ಅಭಿಪ್ರಾಯ. ಸದನದ ಸದಸ್ಯರೆಲ್ಲರೂ ಇಲ್ಲಿದ್ದರು. ಹಿಂದೆ ಸಹ ಈ ರೀತಿ ಮಾಡಿದಾಗ

ನೇರವಾಗಿ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದಾಗ, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದ್ದಾರೆ. ಏಕಾಏಕಿ ಯಾರ ಗಮನಕ್ಕೂ ತರದೆ, ಸ್ವೇಚ್ಛೆಯಿಂದ ಕೇಂದ್ರ ಸರ್ಕಾರದ ಮೇಲೆ ಆಪಾದನೆಗಳನ್ನು ಮಾಡುತ್ತಾ ದರ ಏರಿಸಿರುವುದು ಸರಿಯಲ್ಲ. ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನ ಅನುಮತಿ ಪಡೆದುಕೊಂಡಿದ್ದಾರೋ, ಚರ್ಚೆ ಮಾಡಿದ್ದಾರೋ ಎಂದು ಕೇಳಬಹುದು. ಆಗ ಪಾರ್ಲಿಮೆಂಟ್ ಕಾನ್‌ಸ್ಟಿಟ್ಯೂಟ್ ಆಗಿರಲಿಲ್ಲ, ಆಗಿದ್ದರೆ, ಕೇಂದ್ರ ಸರ್ಕಾರ ಸಹ ಅಲ್ಲಿಯ ಎಲ್ಲಾ ಸರ್ವ ಸದಸ್ಯರನ್ನೂ ಈ ರೀತಿಯ ಚರ್ಚೆಗೆ ಒಳಪಡಿಸಿ, ನಿಗಾವಹಿಸುವಂತಹ ಕೆಲಸಗಳನ್ನು ಮಾಡುತ್ತಿದ್ದರು.

ಡಾ: ವೈ ನಾಗಪ್ಪ (ಹರಿಹರ):– ಆಗ ರಾಜ್ಯಸಭೆ ಇತ್ತು. ನೀವು ರಾಜ್ಯಸಭೆಗೆ ಕೇಳಬಹುದಿತ್ತು.

ಅಧ್ಯಕ್ಷರು:– ಮಧ್ಯೆ ಮಾತನಾಡಬೇಡಿ.

ಶ್ರೀ ಡಿ.ವಿ. ಸದಾನಂದಗೌಡ:– ಇದು ಎಲ್ಲ ಸದಸ್ಯರ ಹಕ್ಕಿನ ಪ್ರಶ್ನೆ. ಆಡಳಿತ ನಡೆಸುವ ಯಾವುದೇ ರಾಜಕೀಯ ಪಕ್ಷ ಇವತ್ತು ಈ ಸದನದ ಕಾರ್ಯಕಲಾಪ ನಡೆಯುತ್ತಿರುವ ಸಂದರ್ಭದಲ್ಲಿ ಸದನದ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದ್ದರೆ, ಆಗುತ್ತಿತ್ತು. ಹೊಸ ಮುಖ್ಯಮಂತ್ರಿಗಳು ಬಂದ ಮೇಲೆ ಪ್ರತಿ ಬಾರಿಯೂ ಕೂಡ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲ ಕೆಲಸ ಮಾಡುತ್ತಾರೆಂದು ಭರವಸೆ ನಮ್ಮೆಲ್ಲರಲ್ಲಿತ್ತು. ಈಗಾಗಲೇ ಉಲ್ಲೇಖ ಮಾಡಿದ ರೀತಿಯಲ್ಲಿ ಹಿಂದೆ ಇದ್ದ ನಮ್ಮ ವಿರೋಧ ಪಕ್ಷದ ನಾಯಕರು ಪ್ರತಿ ಬಾರಿ ಈ ಮಾತನ್ನು ಉಲ್ಲೇಖ ಮಾಡುತ್ತಿದ್ದರು. ಸದನದ ಕಾರ್ಯಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ ಸದನದ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವುದೇ ತೀರ್ಮಾನವನ್ನು ಒಂದು ಸರ್ಕಾರ ತೆಗೆದುಕೊಂಡರೆ ಸರ್ಕಾರದ ಘನತೆ-ಗೌರವ ಹೆಚ್ಚಾಗುತ್ತದೆ. ಜೊತೆಗೆ, ಸಾರ್ವಜನಿಕವಾಗಿ ಆ ವಿಷಯ ಚರ್ಚೆಯಾಗುವಂಥ ಸಂದರ್ಭಗಳಿರುತ್ತವೆಂದು ಹೇಳುವ ಹಿನ್ನೆಲೆಯಲ್ಲಿ ಸದನದಲ್ಲಿ ಚರ್ಚೆಯಾಗಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ. ಆಡಳಿತ ನಡೆಸುವ ಪಕ್ಷ ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇಂಥ ತೀರ್ಮಾನಗಳು ಸರ್ವ ಸದಸ್ಯರ ಸಹಮತದ ಆಧಾರದ ಮೇಲೆ ನಡೆಯಬೇಕು. ಕಾವೇರಿ ತೀರ್ಮಾನವನ್ನು ಈಗಾಗಲೇ ಕಳೆದ ಬಾರಿ ಸದನದಲ್ಲಿ ಪ್ರಸ್ತಾಪಿಸಿದಾಗ, ಎಲ್ಲರೂ ಸೇರಿ ಹೇಗೆ ಒಂದು ತೀರ್ಮಾನ ತೆಗೆದುಕೊಂಡರೋ, ಅದೇ ರೀತಿ ಮಾಡಬೇಕು. ಇದು ಒಬ್ಬಿಬ್ಬರ ಪ್ರಶ್ನೆ ಅಲ್ಲ. ಪ್ರತಿ ದಿನ 60 ಲಕ್ಷ ಜನ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಎಲ್ಲ ವರ್ಗದ ಜನರು ಪ್ರಯಾಣ ಮಾಡುವ ಸಂದರ್ಭದಲ್ಲಿ, ಅವರ ಕುಟುಂಬ ವರ್ಗದ ಸಮಸ್ಯೆ ಕೂಡ ಇರುವ ಕಾರಣ, ಇದು ಚರ್ಚೆಗೆ ಬರಬೇಕೆನ್ನುತ್ತಿದ್ದೇನೆ. ಈ ನಿಲುವಳಿ ಸೂಚನೆಯನ್ನು ತಾವೇಕೆ ಸ್ವೀಕಾರ ಮಾಡಬೇಕೆಂದರೆ, ಯಾವುದೋ ಒಂದು ಸಣ್ಣ ಪರ್ಸೆಂಟೇಜ್ ಸಮಸ್ಯೆ

ಅಲ್ಲ, ಏನೋ ಸ್ವಲ್ಪ ವ್ಯತ್ಯಾಸವಾಗಿದ್ದರೆ ನಾವು ಸುಮ್ಮನೆ ಇರಬಹುದಿತ್ತು. ಆದರೆ, ಇವತ್ತು ಇದರ ಬಗ್ಗೆ ಇಡೀ ರಾಜ್ಯದ ಜನ ಆಲೋಚನೆ ಮಾಡುತ್ತಿದ್ದಾರೆ. ಇವರು 16 ಪರ್ಸೆಂಟ್ ಎಂದು ಹೇಳಿದ್ದಾರೆ. ನಾನು ಲೆಕ್ಕ ಮಾಡಿದ್ದೇನೆ, ಅದನ್ನು ನಾನು ಈಗ ಕೊಡುವುದಿಲ್ಲ, ಚರ್ಚೆಗೆ ಅವಕಾಶ ಕೊಟ್ಟರೆ ಹೇಳುತ್ತೇನೆ. ನಗರ, ಗ್ರಾಮಾಂತರದವರಿಗೆ ಒಂದೊಂದು ರೀತಿ ಮಾಡಿದ್ದೀರಿ. ನಗರದವರಿಗೆ 14-16 ಪರ್ಸೆಂಟ್ ಇದ್ದರೆ, ಗ್ರಾಮಾಂತರದವರಿಗೆ 16-40 ಪರ್ಸೆಂಟ್ ಏರಿಕೆಯಾಗಿದೆ. ಕೇಂದ್ರದಲ್ಲಿ ಡೀಸೆಲ್ ಬೆಲೆ ಏರಿಕೆ ಮಾಡುವುದು ಅನಿವಾರ್ಯವಾಗಿತ್ತು. ಪರ್ ಬ್ಯಾರೆಲ್ ಆಯಿಲ್‌ಗೆ 9 ಡಾಲರ್ ಇದ್ದದ್ದು 22 ಡಾಲರ್‌ಗೆ ಹೆಚ್ಚಾದಾಗ ಅನಿವಾರ್ಯವಾಗಿ ಆ ಕೆಲಸವನ್ನು ಮಾಡಬೇಕಾಗಿತ್ತು. ಆಯಿಲ್ ಪೂಲ್ ಡಿಫಿಸಿಟ್ ಎಷ್ಟಿದೆ ಎಂಬುದು ನಮಗೆ ಗೊತ್ತು. ಅಂದರೆ ಕೇಂದ್ರ ಸರ್ಕಾರ 30 ಪರ್ಸೆಂಟ್ ಮಾತ್ರ ಹೆಚ್ಚಿಸಿತು. ನೀವೇನು ಮಾಡಿದಿರಿ, ನಿಮ್ಮ ಕೆಎಸ್‌ಆರ್‌ಟಿಸಿ ವ್ಯವಸ್ಥೆಯಲ್ಲಿ ಡೀಸೆಲ್ ಇನ್‌ಪುಟ್ ಎಷ್ಟಿದೆ ಎಂದರೆ ಶೇ. 21.3. ರಷ್ಟು ಏರಿಕೆ ಮಾಡಬಹುದಾಗಿತ್ತೆಂದರೆ 30 ಇಂಟು 21.3 ಪರ್ಸೆಂಟ್. ಆದರೆ, ಹಾಗೆ ಮಾಡಲಿಲ್ಲ. ಇದು ಚರ್ಚೆಯಾಗಬೇಕು. ಅದಕ್ಕಾಗಿ ನಾನು ಈ ವಿಚಾರವನ್ನು ಮಂಡನೆ ಮಾಡುತ್ತಿದ್ದೇನೆ. ನಿಜವಾದ ಮುಖ್ಯಾಂಶಗಳು, ವಿಚಾರಗಳು ಅಲ್ಲಿ ಅಡಗಿರುವ ಕಾರಣ, ಚರ್ಚೆಗೆ ಅವಕಾಶ ಮಾಡಿಕೊಡಬೇಕು ಮತ್ತು ದರವನ್ನು ಇಳಿಸಬೇಕೆಂಬ ದೃಷ್ಟಿಯಿಂದ ನಾನು ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ. ಕೇಂದ್ರದವರು ಡೀಸೆಲ್ ಬೆಲೆ ಏರಿಸಿದ ಕಾರಣ ನಾವು ಬಸ್ ದರ ಏರಿಸಿದೆವೆಂದು ಹೇಳಬಹುದು. ಹಿಂದೆ ಅಟಲ್‌ಜಿಯವರ ಸರ್ಕಾರವಿದ್ದಾಗ, 12 ಡಾಲರ್‌ನಿಂದ 10 ಡಾಲರ್‌ಗೆ ಅಂದರೆ 2 ರೂ. ಕಡಿಮೆ ಮಾಡಿದರು. ಇವರು ಬೆಲೆ ಕಡಿಮೆ ಮಾಡಿದರೆ? ಕರ್ನಾಟಕ ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿಯವರು ಯಾವುದೇ ದರವನ್ನು ಕಡಿಮೆ ಮಾಡಲಿಲ್ಲ. ಇವತ್ತು ಆದ ಪರ್ಸೆಂಟೇಜ್ ಇವತ್ತು ಇವರು ಏರಿಸಿದ ದಾಖಲೆಗಳು ಸಾಕಷ್ಟು ವ್ಯತ್ಯಾಸವಿರುವಂತಹ ಹಿನ್ನೆಲೆಯಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು. ಈ ಚರ್ಚೆಯ ಹಿನ್ನೆಲೆಯಲ್ಲಿ ದರವನ್ನು ಕಡಿಮೆ ಮಾಡಲೇಬೇಕು. ಇದರಲ್ಲಿ ಯಾವ ದಾಕ್ಷಿಣ್ಯ ಮಾಡುತ್ತಿಲ್ಲ. ಮಾನ್ಯ ಸಗೀರ್ ಅಹಮದ್‌ರವರು ಮಾನ್ಯ ಸಿಂಧ್ಯಾರವರಿಗೆ ಪದೇ ಪದೇ ಆತ್ಮ ಮುಟ್ಟಿ ನೋಡಿಕೊಳ್ಳಿ ಎನ್ನುತ್ತಿದ್ದರು. ಇವತ್ತು ನೀವು ಅದನ್ನು ಮಾಡಬೇಕಾಗುತ್ತದೆ. ಸಾಮಾನ್ಯ ಜನರಿಗೆ ತೊಂದರೆಯಾಗಿರುವ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಆ ಚರ್ಚೆಯ ಹಿನ್ನೆಲೆಯಲ್ಲಿ ಈ ಕೆಲಸಗಳನ್ನು ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ ಸಚಿವರು):- ಆತ್ಮ ಮುಟ್ಟುವುದು ಹೇಗೆ? ನೀವೇ ಹೇಳಿ? ನೀವು ಹೇಳಿದ ಹಾಗೆ ಅವರು ಮಾಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಸಗೀರ್ ಅಹಮದ್‌ರವರಿಗೆ ಗೊತ್ತು. ಇವತ್ತು ಡೀಸೆಲ್ ಹೆಚ್ಚು ರೈಲ್ವೆಯಲ್ಲಿ ಖರ್ಚಾಗುತ್ತಿದೆ. ಅಲ್ಲಿ ಶೇ. 60ಕ್ಕಿಂತ ಹೆಚ್ಚು ಡೀಸೆಲ್

ಕನ್‌ಸಂಪ್‌ಷನ್ ಆಗುತ್ತಿದೆ. ಮಮತಾ ಬ್ಯಾನರ್ಜಿಯವರು ರೈಲು ದರವನ್ನು ಏರಿಸುವುದಿಲ್ಲವೆಂದಿದ್ದಾರೆ.

ಶ್ರೀ ಅಧ್ಯಕ್ಷರು:- ಬಸ್ಸಿನ ಬಗ್ಗೆ ಮಾತನಾಡಿ. ರೈಲಿನ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ:- ಅದರ ಬದಲು ಇಂಟರ್ನಲ್ ಎಕ್ಸ್‌ಪೆಂಡಿಚರ್, ಸೋರಿ ಹೋಗುವುದನ್ನು ನಿಲ್ಲಿಸುತ್ತೇವೆಂದು ಮಮತಾ ಬ್ಯಾನರ್ಜಿಯವರು ಹೇಳಿದ್ದಾರೆ. ಶೇ. 60ಕ್ಕಿಂತ ಹೆಚ್ಚು ರೈಲಿನಲ್ಲಿ ಡೀಸೆಲ್ ಕನ್‌ಸಂಪ್‌ಷನ್ ಆಗುವ ಅಲ್ಲೇ ಆ ರೀತಿ ಮಾಡಿದಾಗ, ಕೆಎಸ್‌ಆರ್‌ಟಿಸಿಯವರು ಅದನ್ನು ಪರಿಗಣನೆ ಮಾಡಬೇಕು ಮತ್ತು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅಂಕಿಅಂಶಗಳ ಆಧಾರದ ಮೇಲೆ, ಇವರ ಮನಸ್ಸಿಗೆ ಮುಟ್ಟುವಂತೆ ಎಲ್ಲ ವಿಚಾರಗಳನ್ನು ಪ್ರಸ್ತಾಪ ಮಾಡಲು ನಾವು ತಯಾರಿದ್ದೇವೆ. ನಮಗೆ ವಿಶ್ವಾಸವಿದೆ, ಈಗಾಗಲೇ ಕೇಳಿದಾಗಲೇ, ತಮ್ಮ ನಗುಮುಖದಿಂದ ಈ ನಿಲುವಳಿ ಸೂಚನೆಗೆ ಅವಕಾಶ ಕೊಡುತ್ತೀರೆಂಬ ಕಲ್ಪನೆಯಿಂದ ನಮಗೆ ಭರವಸೆ ಇದೆ. ಅದರ ಬಗ್ಗೆ ಚರ್ಚೆಯಾಗಲಿ. 60 ಲಕ್ಷ ಜನರ ದಿನನಿತ್ಯದ ಬದುಕಿನ ವ್ಯವಸ್ಥೆಯ ಕಾರಣ ಇದು ಚರ್ಚೆಯಾಗಬೇಕೆಂದು ಕೇಳುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ(ಹೊಸಕೋಟೆ):- ಈ ಸದನ ನಡೆಯುತ್ತಿರುವ ಸಂದರ್ಭದಲ್ಲಿ ಏಕಾ-ಏಕಿ ಜನ ಸಾಮಾನ್ಯರ ಮೇಲೆ ಭಾರೀ ಹೊರೆ ತರುವ ಬಸ್ಸಿನ ದರವನ್ನು ಏರಿಸಿರುವುದರ ವಿರುದ್ಧ ಈ ನಿಲುವಳಿ ಸೂಚನೆ ಇದೆ. ಈಗಾಗಲೇ ನಮ್ಮ ನಾಯಕರು ಮಾತನಾಡಿದ್ದಾರೆ. ನಾನು ಆ ಇಲಾಖೆಯ ಸಚಿವನಾಗಿ 6 ತಿಂಗಳು ಕೆಲಸ ಮಾಡಿದ್ದೇನೆ. ಇವತ್ತು ರಾಷ್ಟ್ರದಲ್ಲಿ ನಮ್ಮ ಸಾರಿಗೆ ಸಂಸ್ಥೆ ಎರಡನೇ ಸ್ಥಾನದಲ್ಲಿದೆ. ಈ ಸಂಸ್ಥೆ ರಾಜ್ಯದ ಸುಮಾರು 75 ಲಕ್ಷ ಜನರಿಗೆ ದಿನನಿತ್ಯ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಟ್ಟಿರುವ ಕೀರ್ತಿಗೆ ಪಾತ್ರವಾಗಿದೆ. ಹಿಂದೆ ಸಚಿವರಾಗಿ ಮಾನ್ಯ ಸಿಂಧ್ಯರವರು 3 ಬಾರಿ ಕೆಲಸ ಮಾಡಿದ್ದಾರೆ. ಅದನ್ನು ಬೆಳೆಸುವ ದೃಷ್ಟಿಯಿಂದ ಬಿಎಂಆರ್‌ಟಿಸಿ, ಎನ್‌ಡಬ್ಲ್ಯುಕೆಎಸ್‌ಆರ್‌ಟಿಸಿ, ಕೆಎಸ್‌ಆರ್‌ಟಿಸಿ ಎಂದು ಮೂರು ಭಾಗಗಳನ್ನು ಮಾಡಿ ನಷ್ಟ ಭರಿಸಿ ಸಮ ಭಾಗದಲ್ಲಿ ತರಲು ಈ ವ್ಯವಸ್ಥೆ ಇರುವುದು. ನಾನು ಸಚಿವನಾಗಿದ್ದಾಗ, ಮುಂದೆ ಬರುವ ಸರ್ಕಾರ ಡೀಸೆಲ್ ಬೆಲೆ ಜಾಸ್ತಿ ಮಾಡಬಹುದೆಂದು ನಿರೀಕ್ಷಿಸಿ, ನಷ್ಟ ಭರಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಶಿಫಾರಸು ಮಾಡಿದ್ದೆ. ಆದರೆ, ಇವರು ಈ ರೀತಿ ಮನಸ್ಸಿಗೆ ಬಂದಂತೆ ನಮ್ಮನ್ನು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅಥವಾ ಮಾನ್ಯ ಸಿಂಧ್ಯರವರು ಸೂಚಿಸಿದ ಹಾಗೆ ಟಾರಿಫ್ ಕಮಿಟಿ ಮೂಲಕ ವರದಿ ತರಿಸಿಕೊಳ್ಳದೆ, ಯದ್ವಾತದ್ವಾ ಬೆಲೆಯನ್ನು ಜಾಸ್ತಿ ಮಾಡಿರುವುದನ್ನು ತಮ್ಮ ಗಮನಕ್ಕೆ ತರುವ ವಿಷಯ ಇದಾಗಿದೆ. ಮಾನ್ಯ ಸಗೀರ್‌ರವರು ಇಲಾಖೆಯ ಅಧಿಕಾರ ವಹಿಸಿಕೊಂಡ ಮೊದಲನೆ ದಿವಸ ದರವನ್ನು ಏರಿಸುವುದಿಲ್ಲವೆಂದಿದ್ದರು.

ಡೀಸಲ್ ಬೆಲೆ ಏರಿದಾಕ್ಷಣಕ್ಕೆ ಇಲ್ಲಿ ಕೆ.ಎಸ್.ಆರ್.ಟಿ.ಸಿ. ಬೆಲೆ ಕೂಡ ಜಾಸ್ತಿಯಾಗುತ್ತದೆಂದು ನಾವು ನಿರೀಕ್ಷಿಸಿರಲಿಲ್ಲ. ಬಡವರು ಪ್ರಯಾಣ ಮಾಡುವಂತಹ ಒಂದು ಬಸ್ಸಿನ ಬೆಲೆಯನ್ನು ಈ ರೀತಿ ಕೊಡುಗೆ ರೂಪದಲ್ಲಿ ಬೆಲೆ ಏರಿಸುತ್ತೀರಿ ಎಂದು ನಾವು ಹೊಸ ಸರ್ಕಾರದಿಂದ ನಿರೀಕ್ಷೆ ಮಾಡಿರಲಿಲ್ಲ. ಈ ರೀತಿ ಬೆಲೆ ಏರಿಸಿ ಸಾಮಾನ್ಯ ಜನರಿಗೆ ಹೊರೆಯಾಗಿದೆ. ಕೇಂದ್ರ ಸರ್ಕಾರದವರು ಡೀಸೆಲ್ ಬೆಲೆ ಏರಿಸಿರುವುದರಿಂದ ನಾವು ಕೂಡ ಏರಿಸಿದ್ದೇವೆಂದು ಸಮರ್ಥನೆ ಮಾಡುವಂಥದ್ದು ಸರಿಯಲ್ಲವೆಂದು ನನ್ನ ಭಾವನೆ. ಇದರ ಜೊತೆಗೆ ಇವರೇನು ಜಾಸ್ತಿ ಹೊರೆ ಹಾಕಿದ್ದಾರೆ ಅದರ ಬಗ್ಗೆ ನಾನು ಕೆಲವು ಅಂಕಿಅಂಶಗಳನ್ನು ತಮಗೆ ಹೇಳಬಯಸುತ್ತೇನೆ. 114 ಕೋಟಿ ರೂಪಾಯಿಗಳ ನಷ್ಟ ಬರುತ್ತದೆಂದು ಸಂಸ್ಥೆಯವರು ತಿಳಿಸಿರುತ್ತಾರೆ. ಆದರೆ ಇವರು ಇವತ್ತು 124 ಕೋಟಿ ರೂಪಾಯಿನಷ್ಟು ಹೆಚ್ಚು ಮಾಡಿ ಅದರಲ್ಲಿ ಒಂದು ಕುಷನ್ ಕೊಟ್ಟು 14 ಕೋಟಿ ರೂಪಾಯಿ ಜಾಸ್ತಿ ಮಾಡಿಕೊಂಡಿದ್ದಾರೆಂದು ಕಾಣಿಸುತ್ತದೆ. ಇದು ಇವರು ಮಾಡಿಕೊಂಡಿರುವ ವ್ಯವಸ್ಥೆ. ಬೆಲೆ ಏರಿಕೆ 22.4ರಷ್ಟು ಏರಿಕೆಯಾಗಿದೆ. ಇದರಲ್ಲಿ ಸಬ್-ಬರ್ನ್ ಷೆಡ್ಯೂಲ್ ಬಗ್ಗೆ ವಿಶೇಷವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಫಸ್ಟ್ ಸ್ಟೇಜಿನಲ್ಲಿ 1-75 ಪೈಸೆ ಇದ್ದದ್ದು, 2-50 ಪೈಸೆ ಮಾಡಿದ್ದಾರೆ. 75 ಪೈಸೆ ಜಾಸ್ತಿ ಮಾಡಿದ್ದಾರೆ. ಅಂದರೆ 42.58 ಪರ್ಸೆಂಟ್ ಇದರಲ್ಲಿ ಜಾಸ್ತಿಯಾಗಿದೆ. ಸೆಕೆಂಡ್ ಸ್ಟೇಜ್‌ನಲ್ಲಿ 2-25 ಪೈಸೆ ಇದ್ದದ್ದು 3-00 ರೂಪಾಯಿಗೆ ಏರಿಸಿದ್ದಾರೆ. ಇದರಲ್ಲಿ 33.3 ಪರ್ಸೆಂಟ್ ಜಾಸ್ತಿಯಾಗಿದೆ. ಥರ್ಡ್ ಸ್ಟೇಜಿನಲ್ಲಿ 2-75ಪೈಸೆ ಇದ್ದದ್ದು 3-50 ಪೈಸೆ ಮಾಡಿದ್ದಾರೆ. ಅಂದರೆ ಇದರಲ್ಲಿ 27.3 ಪರ್ಸೆಂಟ್ ಜಾಸ್ತಿಯಾಗಿದೆ. ಫೋರ್ತ್ ಸ್ಟೇಜಿನಲ್ಲಿ 3-25 ಪೈಸೆ ಇದ್ದದ್ದು 4-00 ರೂಪಾಯಿಗೆ ಜಾಸ್ತಿ ಮಾಡಿದ್ದರಿಂದ ಇದರಲ್ಲಿ 23 ಪರ್ಸೆಂಟ್ ಜಾಸ್ತಿಯಾಗಿದೆ. ಫಿಫ್ತ್ ಸ್ಟೇಜಿನಲ್ಲಿ 3-75 ಪೈಸೆ ಇದ್ದದ್ದು 4-50 ಪೈಸೆ ಗೆ ಏರಿಸಿದ್ದಾರೆ. ಹೀಗೆ ಬೆಲೆಗಳನ್ನು ಏರಿಸಿ ಇವರು 16 ಪರ್ಸೆಂಟ್ ಜಾಸ್ತಿ ಮಾಡಿದ್ದಾರೋ ಅಥವಾ 22 ಪರ್ಸೆಂಟ್ ಜಾಸ್ತಿ ಮಾಡಿದ್ದಾರೋ ಎಂಬುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕಾಗುತ್ತದೆ. ಡೀಸೆಲ್ ಬೆಲೆ 35 ಪೈಸೆ ಜಾಸ್ತಿಯಾದರೆ ನೀವು ಎಷ್ಟು ಜಾಸ್ತಿ ಮಾಡಿದ್ದೀರಿ? ಎಷ್ಟು ಪರ್ಸೆಂಟೇಜ್ ಜಾಸ್ತಿ ಮಾಡಿದ್ದೀರಿ? ಎಂಬಿತ್ಯಾದಿ ವಿವರಗಳನ್ನು ತಾವು ಸದನಕ್ಕೆ ತಿಳಿಸಬೇಕಾಗುತ್ತದೆ. ಏಕೆಂದರೆ ಇದರಲ್ಲಿ ಕೆಲವು ವ್ಯತ್ಯಾಸಗಳು ಇವೆ. ಕೆಲವು ಕಡೆ 16 ಪರ್ಸೆಂಟ್ ಜಾಸ್ತಿಯಾಗಿದ್ದರೆ ಕೆಲವು ಕಡೆ 22 ಪರ್ಸೆಂಟ್ ಜಾಸ್ತಿ ಮಾಡಿದ್ದೇವೆಂದು ಹೇಳುತ್ತೀರಿ. ಇದರ ಜೊತೆಗೆ ಬಿ.ಎಂ.ಟಿ.ಸಿ. ಏನಿದೆ ಇಲ್ಲಿ ಅಧಿಕ ಹೊರೆಯನ್ನು ಹಾಕಿದ್ದೀರಿ. ಬೇರೆ ಬೇರೆ ಸ್ಟೇಜಿನ ವಿವರ ಇಲ್ಲಿದೆ, ನಾನು ಇದರ ಬಗ್ಗೆ ಇಲ್ಲಿ ಎಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿಯೇ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸಾಮಾನ್ಯ ಬಸ್ಸಿಗೆ 21 ಪೈಸೆಯಿಂದ 24 ಪೈಸೆ ಏರಿಸಿರುವುದರಿಂದ 3 ಪೈಸೆ ಜಾಸ್ತಿಯಾಗಿದೆ. ವೇಗದೂತ ಬಸ್ಸಿಗೆ 25 ಪೈಸೆಯಿಂದ 29.5ಪೈಸೆಗೆ ಏರಿಸಿರುವುದರಿಂದ 4.5ಪೈಸೆ

ಜಾಸ್ತಿಯಾಗಿದೆ. ಅದೇ ರೀತಿ ಲಕ್ಸುರಿ ಬಸ್ಸಿನಲ್ಲಿ 31 ಪೈಸೆಯಿಂದ 36 ಪೈಸೆಯವರೆಗೆ ಏರಿಸಿರುವುದರಿಂದ ಪ್ರತಿ ಕಿಲೋ ಮೀಟರ್‌ಗೆ ಐದು ಪೈಸೆಯಷ್ಟು ಜಾಸ್ತಿ ಮಾಡಿದ್ದಾರೆ. ಮಂಗಳೂರಿನಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ವಲ್ಪ ಹೆಚ್ಚು ಕಡಿಮೆ 25 ರೂಪಾಯಿಗಳಿಂದ 30 ರೂಪಾಯಿಗಳಷ್ಟು ಹೆಚ್ಚಾಗಿರುವುದರಿಂದ ಅಧಿಕ ಹೊರೆಯಾಗಿದೆ. ಅದೇ ರೀತಿ ಹೈ-ಟೆಕ್ ಬಸ್ಸಿನಲ್ಲಿ 37 ಪೈಸೆಯಿಂದ 43 ಪೈಸೆಯವರೆಗೆ ಜಾಸ್ತಿಯಾಗಿದೆ. ಒಟ್ಟಾರೆ ಸಾಮಾನ್ಯ, ವೇಗದೂತ, ಲಕ್ಸುರಿ, ಇಂಥ ಬಸ್ಸಿನಲ್ಲಿ ಸುಮಾರು 16.2 ಪರ್ಸೆಂಟ್ ಜಾಸ್ತಿಯಾಗಿದೆ. ಈ ರೀತಿಯಾಗಿ ಏಕಾಏಕಿಯಾಗಿ ಬಸ್ ದರ ಜಾಸ್ತಿ ಮಾಡಿದ್ದಾರೆ. ಮಾನ್ಯ ನಾಯಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಹೆಚ್.ಕೆ. ಪಾಟೀಲರ್‌ರವರು ಈ ಕಡೆ ಕುಳಿತಿದ್ದಂಥ ಸನ್ನಿವೇಶದಲ್ಲಿ ನೀರಿನ ದರ, ಹಾಲಿನ ದರ, ವಿದ್ಯುತ್ ದರ, ಜಾಸ್ತಿ ಮಾಡಿದ್ದೀರಿ ಎಂದು ಅನೇಕ ಸಲ ಬೊಬ್ಬೆಯಿಟ್ಟಿದ್ದರು. ಈ ರೀತಿ ಇರುವಾಗ ಇವರು ಪ್ರಾರಂಭದಲ್ಲಿಯೇ ಸಾಮಾನ್ಯ ಜನಗಳು ಓಡಾಡುವಂಥ ಬಸ್ಸಿನ ದರ ಹೆಚ್ಚು ಮಾಡಿದರೆ ಹೇಗೆ? ಬೆಲೆ ಜಾಸ್ತಿ ಮಾಡಿದರೂ ಕೂಡ ಇದರಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಒಂದೂ ಮಾತಿಲ್ಲ. ಮಾನ್ಯ ಸಚಿವರು ಈ ಕಡೆ ಗಮನವನ್ನೇ ಕೊಟ್ಟಿಲ್ಲ. ಸಂಪನ್ಮೂಲಗಳನ್ನು ಯಾವ ರೀತಿ ಕ್ರೋಢೀಕರಿಸಬೇಕು, ಇದರಿಂದ ನಾವು ಏನು ಸಹಾಯ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಇವರು ಇನ್ನೂ ಯೋಜನೆ ಮಾಡಿಲ್ಲ. ಎಲ್ಲಿ ಲೂಪ್ ಹೋಲ್ಸ್ ಇದೆ, ಯಾವ ರೀತಿ ಪ್ಲಗ್ ಮಾಡಬೇಕು, ಪಿಲಿಫ್‌ರೇಜ್ ಏನಿದೆ, ಎಲ್ಲಿ ಸೋರಿಕೆ ಇದೆ, ಇದರ ಬಗ್ಗೆ ನಾವೇನು ಮಾಡಿಕೊಳ್ಳಬೇಕು, ಎಂಬಿತ್ಯಾದಿ ಬಗ್ಗೆ ಇವರು ಇನ್ನೂ ಚಿಂತನೆಯನ್ನು ಮಾಡಿಲ್ಲ. ಸದನ ನಡೆಯುವಂತಹ ಸಂದರ್ಭದಲ್ಲಿ, ಟ್ಯಾರೀಫ್ ಕಮಿಟಿಯ ರಿಪೋರ್ಟ್ ತೆಗೆದುಕೊಳ್ಳದೇ ಏಕಾಏಕಿಯಾಗಿ ಈ ಸರ್ಕಾರ ಜನರ ಮೇಲೆ ಈ ರೀತಿ ಹೊರೆ ಹಾಕಿದ್ದಾರೆ. ಇದು ತಪ್ಪುದಾರಿಗೆ ಹೋಗುತ್ತಿದ್ದಾರೆಂದು ತಿಳಿಸುವುದರ ಜೊತೆಗೆ ಇವತ್ತು ನಮ್ಮ ರಾಜ್ಯದಲ್ಲಿ 27 ಸಾವಿರ ಕಂದಾಯ ಗ್ರಾಮಗಳಿವೆ. ಸಂಚಾರದ ವ್ಯವಸ್ಥೆ ಕೊಟ್ಟಿರುವುದು 19 ಸಾವಿರ ಗ್ರಾಮಗಳಿಗೆ ಮಾತ್ರ. ಸ್ವತಂತ್ರ ಬಂದು ಐವತ್ತು ವರ್ಷ ಕಳೆದರೂ ಇನ್ನೂ ಒಂಬತ್ತು ಸಾವಿರ ಹಳ್ಳಿಗಳಿಗೆ ನಮ್ಮಲ್ಲಿ ಬಸ್ ಸಂಚಾರದ ವ್ಯವಸ್ಥೆ ಇಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ. 27 ಸಾವಿರ ಗ್ರಾಮಗಳಿಗೂ ಬಸ್ ಸಂಚಾರದ ವ್ಯವಸ್ಥೆ ಮಾಡುತ್ತೇವೆ ಎನ್ನುವ ಇವರ ಯೋಜನೆ ಇದೆಯೇ? ಖಾಸಗಿ ಬಸ್‌ಗಳನ್ನು ಸಂಚಾರದ ವ್ಯವಸ್ಥೆಗೆ ಬಳಸಿಕೊಂಡರೆ ಎಲ್ಲಾ ಹಳ್ಳಿಗಳಿಗೂ ಈ ಖಾಸಗಿ ಬಸ್‌ಗಳು ಹೋಗುವುದಿಲ್ಲ. ಇದರಲ್ಲಿ ಕೂಡ ಎ,ಬಿ,ಸಿ, ಎನ್ನುವ ವರ್ಗಗಳು ಇವೆ. ಅಂದರೆ ಲಾಭದಲ್ಲಿ ಓಡಾಡುವ (ಎ) ರಸ್ತೆಗಳು, ಲಾಭ-ನಷ್ಟದಲ್ಲಿ ಓಡಾಡುವ (ಬಿ), ರಸ್ತೆಗಳು, ಮತ್ತು ಬರೀ ನಷ್ಟದಲ್ಲಿ ಓಡಾಡುವಂತಹ (ಸಿ) ರಸ್ತೆಗಳು. ಅಂದರೆ ನಮ್ಮ ಮಫ್ಯೂಜಲ್ ರೂಟ್ಸ್ ಏನಿದೆ ಇದರಲ್ಲಿ ಓಡಾಡುವಂತಹ ಹಳ್ಳಿಯ ರೈತರುಗಳಿಗೆ ಇವರು ಏನು ಸೌಕರ್ಯ ಕೊಟ್ಟಿದ್ದಾರೆ?

ಇದನ್ನು ಮಾನ್ಯ ಸಚಿವರು ತಿಳಿಸಬೇಕು. ಇನ್ನು ರೂರಲ್ ರೋಡ್ಸ್‌ಗಳಿಗೆ ಏನು ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ ಎಂಬುದನ್ನು ಹೇಳಬೇಕಾಗುತ್ತದೆ. ಏಕೆಂದರೆ, ನಮ್ಮ ಸರ್ಕಾರ ಇದ್ದಾಗ ಸಾಕಷ್ಟು ರಿಲೀಫ್ ಕೊಟ್ಟಿದ್ದೇವೆ. 58 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಮುಖಾಂತರ ಆ ಸಂಸ್ಥೆಗೆ ಕೊಟ್ಟಿದ್ದೆವು. ಅದೇ ರೀತಿ ಟ್ಯಾಕ್ಸ್ ರಿಲೀಫ್ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತು 100 ಕೋಟಿ ರೂಪಾಯಿಗಳನ್ನು ಆ ಸಂಸ್ಥೆಗೆ ಕೊಡುತ್ತೇವೆ. ಇನ್ನೂ ಹೆಚ್ಚಿನ ಬಸ್‌ಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಎರಡು ಸಾವಿರ ಬಸ್‌ಗಳನ್ನು ನಾವು ಖರೀದಿ ಮಾಡುತ್ತೇವೆಂದು ಹೇಳಿದರು, ನಾವು ಖರೀದಿ ಮಾಡುವ ಬಸ್‌ಗಳೆಲ್ಲವೂ ರಿಪ್ಲೇಸ್‌ಮೆಂಟಿಗೆ ಆಗುತ್ತವೆ. ಏಳುವರೆ ಲಕ್ಷ ಕಿಲೋ-ಮೀಟರ್ ಓಡಿದಂಥ ಬಸ್ ಪ್ರತಿ ವರ್ಷ ರಿಪ್ಲೇಸ್‌ಮೆಂಟಿಗೆ ಆಗುತ್ತದೆ. ಇವತ್ತು ರಾಜ್ಯದಲ್ಲಿ ಹನ್ನೊಂದು ಸಾವಿರ ಷೆಡ್ಯೂಲ್ಸ್ ಇದೆ. ಇವುಗಳನ್ನು ಹೆಚ್ಚು ಮಾಡಬೇಕು. ಇದಕ್ಕೋಸ್ಕರ 500 ಅಥವಾ 1000 ಷೆಡ್ಯೂಲ್ಸ್‌ನ್ನು 50 ಪರ್ಸೆಂಟ್ ಆದರೂ ಗ್ರಾಮಗಳಲ್ಲಿ ಸಂಚರಿಸುವ ಷೆಡ್ಯೂಲ್ಸ್‌ನ್ನು ಹೆಚ್ಚು ಮಾಡುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ನಮ್ಮ ನಾಯಕರಾದ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಾರಿಗೆ ಸಚಿವರು ಒಂದು ಕಡೆ ಮಾತನಾಡುತ್ತಾ ಖಾಸಗೀಕರಣಕ್ಕೆ ನಮ್ಮ ಒತ್ತು ಇದೆ ಎನ್ನತಕ್ಕಂಥ ಅಂಶವನ್ನು ಹೇಳಿದ್ದಾರೆ. ಇದು ಸರಿಯಲ್ಲ.. ದಯಮಾಡಿ ಈ ಅಪಸ್ವರ ಬೇಡ. ದಿವಂಗತ ಶ್ರೀ ದೇವರಾಜ್ ಅರಸರವರು ತಿಳಿಸಿದ ಹಾಗೆ ರಾಷ್ಟ್ರೀಕರಣದ ವ್ಯವಸ್ಥೆ ಮಾಡಿಕೊಂಡು ಎಲ್ಲಾ 27 ಜಿಲ್ಲೆಗಳಲ್ಲಿ ರಾಷ್ಟ್ರೀಕರಣದ ವ್ಯವಸ್ಥೆಯಿಂದ ಬಹಳ ಉತ್ತಮ ಸೇವೆಯನ್ನು ಕೊಡುವಂಥ ಈ ಸಾರಿಗೆ ವ್ಯವಸ್ಥೆ ಸಾಕಷ್ಟು ಬಲಿಷ್ಟವಾಗಿದೆ. ಇದರಲ್ಲಿ ಪುನಃ ಖಾಸಗೀಕರಣದ ಮಾತು ಬೇಡ. ಇರುವ ಎಲ್ಲಾ ಜಿಲ್ಲೆಗಳಲ್ಲಿ ಕೂಡ ರಾಷ್ಟ್ರೀಕರಣ ಮಾಡಬೇಕು, ಅದನ್ನು ಬಿಟ್ಟು ಖಾಸಗೀಕರಣಗೊಳಿಸಿದರೆ ಹೇಗೆ? ಬಹುಶಃ ತಮಗೆ ಅನುಭವ ಇದೆ ಎಂದು ನಾನು ಭಾವಿಸಿ ಹೇಳುವುದಾದರೆ, ಖಾಸಗೀಕರಣವಾದಂಥ ಬಸ್‌ಗಳು ಕೇವಲ ದೊಡ್ಡ ದೊಡ್ಡ ಮಾರ್ಗಗಳಲ್ಲಿ ಸಂಚರಿಸುತ್ತಾರೆ ವಿನಾಃ ನಷ್ಟ ಉಂಟಾಗುವ ಮಾರ್ಗಗಳಲ್ಲಿ ಒಂದು ಕಡೆ ಕೂಡ ಅವರು ಹೋಗುವುದಿಲ್ಲ. ಲಾಭ ಬರುವ ಮಾರ್ಗಗಳಲ್ಲಿ ಮಾತ್ರ ಅವರು ಸಂಚರಿಸುತ್ತಾರೆ. ಇವರು ತೆಗೆದುಕೊಂಡಿರತಕ್ಕಂಥ ಪರ್ಮಿಟ್ ಬೇರೆ, ಇವರು ಹೋಗುವಂಥ ವ್ಯವಸ್ಥೆ ಬೇರೆ. ಉದಾಹರಣೆಗೆ ಹೇಳುವುದಾದರೆ ಚಿತ್ರದುರ್ಗದಲ್ಲಿ ದೇವರ-ಬೆಳಕೆರೆ ಎಂಬ ಹೊಂಡಕ್ಕೆ ಬಸ್ ಹೋಗಿ ಬಿದ್ದಂಥ ಘಟನೆಯನ್ನು ಕೂಡ ನಾವು ನೋಡಿದ್ದೇವೆ, ಇದರಿಂದ ಹಲವಾರು ಸಾವು-ನೋವುಗಳು ಉಂಟಾಗಿವೆ. ನಂತರ ಇದೇ ಜಿಲ್ಲೆಯಲ್ಲಿ ಮತ್ತೊಂದು ಬಸ್ ದುರಂತವಾಗಿದೆ. ಹೀಗಾಗಿ ಖಾಸಗಿ ಬಸ್ಸುಗಳು ಕೇವಲ ಲಾಭ ಬರುವ ರಸ್ತೆಯಲ್ಲಿ ಮಾತ್ರ ಸಂಚರಿಸುತ್ತವೆ. ಆದ್ದರಿಂದ ಈ ಖಾಸಗೀಕರಣ ಬೇಡ, ಸಂಪೂರ್ಣ ರಾಷ್ಟ್ರೀಕರಣ ಆಗಬೇಕು, ಈ ರಾಜ್ಯದಲ್ಲಿ ಸಂಪೂರ್ಣ ಮನೋಪಾಲಿ ವ್ಯವಸ್ಥೆ

ಇರಬೇಕು ಎಂದು ತಿಳಿಸುತ್ತಾ, ಇದಕ್ಕೊಂದು ಟ್ಯಾರೀಫ್ ಕಮಿಟಿಯನ್ನು ನೇಮಕ ಮಾಡಿ ಇವತ್ತು ಹೆಚ್ಚಿಸಿರುವ ದರಗಳನ್ನು ತಡೆಹಿಡಿದು, ಎಷ್ಟು ಬೆಲೆ ಏರಿಸಿದರೆ ಎಷ್ಟು ಲಾಭ-ನಷ್ಟ ಉಂಟಾಗುತ್ತದೆ ಇದರಿಂದ ಉಂಟಾಗುವ ಸಾಧಕ-ಭಾಧಕಗಳೇನು ಎಂಬುದರ ಬಗ್ಗೆ ಕಾಳಜಿ ವಹಿಸಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ನಾನು ತಿಳಿಸಿದ ಹಾಗೆ. It is not 16.4%. It is more than 22% and in sub-urban areas. It is more than 35%. ಇದನ್ನು ಮಾನ್ಯ ಸಚಿವರು ಸರಿಯಾಗಿ ಅರ್ಥ ಮಾಡಿಕೊಂಡು, ತಿಳಿದುಕೊಂಡು, ಸಂಪನ್ಮೂಲಗಳನ್ನು ಜಾಸ್ತಿ ಮಾಡಿಕೊಂಡು, ಬಡವರಿಗೆ, ಶ್ರೀ ಸಾಮಾನ್ಯರಿಗೆ, ಕಡಿಮೆ ದರದಲ್ಲಿ ಓಡಾಡುವಂಥ ಬಸ್‌ನ ದರವನ್ನು ಇಳಿಸಬೇಕು. ಸಾಹುಕಾರರು ಕಾರುಗಳಲ್ಲಿ ಓಡಾಡುತ್ತಾರೆ. ಎರಡನೇ ದರ್ಜೆಯವರು ಸ್ಕೂಟರ್, ಟೂ-ವೀಲರ್‌ಗಳಲ್ಲಿ ಓಡಾಡುತ್ತಾರೆ, ಜನ ಸಾಮಾನ್ಯರು ಈ ಬಸ್‌ಗಳಲ್ಲಿ ಓಡಾಡುತ್ತಾರೆ, ಆದ್ದರಿಂದ ಈಗ ಏರಿಸಿರುವ ದರವನ್ನು ಕಡಿಮೆಗೊಳಿಸಿ ಇಂಥ ಸಾಮಾನ್ಯ ಜನರಿಗೆ ಸಹಾಯ ಮಾಡಬೇಕು ಎಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗಾಗಲೇ ಸುಮಾರು 50 ನಿಮಿಷಗಳ ಕಾಲ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಸೋಮಣ್ಣನವರು, ಈ ಕಡೆ ಮತ್ತೊಬ್ಬರು ಮಾತನಾಡಿದ ನಂತರ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು):- ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿ ಕೊಟ್ಟು ಅದರ ಬಗ್ಗೆ ಕನ್‌ವಿನ್ಸ್ ಮಾಡುವುದು ಬಿಟ್ಟು ಬೇರೆ ವಿಷಯವನ್ನು ಮಾತನಾಡುತ್ತಾರೆ. ನಾವು ಪ್ರಾರಂಭದಿಂದ ಸಂಸದೀಯ ವ್ಯವಸ್ಥೆಯಲ್ಲಿ ಸ್ವಲ್ಪ ನಡವಳಿಕೆಗಳನ್ನು ಸರಿಮಾಡಿಕೊಂಡು ಹೋಗದೇ ಇದ್ದರೆ ಹೀಗೆ ಹೋಗಿ ಬಿಡುತ್ತೇವೆ. ಅದಕ್ಕಾಗಿ ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ನಿಲುವಳಿ ಸೂಚನೆಯಲ್ಲಿ ಮೊದಲನೆ ಕ್ರಮ ಏನೆಂದರೆ, ನೋಟೀಸ್ ಕೊಡಬೇಕಾದವರು ನಾಲ್ಕು ಜನಕ್ಕೆ ನೋಟೀಸ್ ಕೊಡಬೇಕಾಗುತ್ತದೆ. ಸ್ಪೀಕರ್‌ಗೆ, ಲೀಡರ್ ಆಫ್ ದಿ ಹೌಸ್‌ಗೆ, ಕನಸರ್ಲ್ಡ್ ಮಿನಿಸ್ಟರ್‌ಗೆ ಹಾಗೂ ಸಂಸದೀಯ ಸಚಿವರಿಗೆ, ಹೀಗೆ ನಾಲ್ಕು ಜನಕ್ಕೆ ನೋಟೀಸ್‌ನ್ನು ಕೊಡಬೇಕಾಗುತ್ತದೆ. ಇದುವರೆವಿಗೂ ನನಗೆ ಯಾವುದೇ ನಿಲುವಳಿ ಸೂಚನೆಯ ನೋಟೀಸ್ ಬಂದಿಲ್ಲ. ನನಗೆ ಏಕೆ ಬಂದಿಲ್ಲವೆಂದು ಪ್ರಶ್ನಿಸುತ್ತೇನೆಂದರೆ, ಇದರಲ್ಲಿ ಯಾರ್‍ಯಾರು ಸಿಗ್ನೇಟರ್ಸ್ ಎಂಬುದು ನನಗೆ ಗೊತ್ತಿಲ್ಲ. ಸಹಿ ಮಾಡಿರುವವರು ಮಾತ್ರ ಇದರ ಬಗ್ಗೆ ಮಾತನಾಡಿ ಎಂದು ಹೇಳೋಣ ಅಂದರೆ ಯಾರ್‍ಯಾರು ಸಹಿ ಮಾಡಿದ್ದಾರೆಂಬುದು ಗೊತ್ತಿಲ್ಲ. ಇನ್ನು ಎರಡನೆಯ ಬಹಳ ಮುಖ್ಯವಾದ ವಿಚಾರ ಎಂದರೆ, ಈ ಸದನ ನಡೆಯುವಂತಹ ಸಂದರ್ಭದಲ್ಲಿ ಮಾನ್ಯ ಸದಾನಂದಗೌಡರು ಹಾಗೂ

ಹಿಂದೆ ಕಂದಾಯ ಸಚಿವರಾಗಿದ್ದಂಥವರು ಇವರೆಲ್ಲರೂ ಪ್ರಸ್ತಾಪಿಸಿದ್ದಾರೆ. ಅವರಿಗೆ ನಾನೊಂದು ಮಾತನ್ನು ಕೇಳಬೇಕು, ಅಕ್ಟೋಬರ್ 6ನೇ ತಾರೀಖು ಡೀಸೆಲ್ ಬೆಲೆಯ ಏರಿಕೆಯನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದೇ ದಿವಸ . . . ಇದು ನಿಲುವಳಿ ಸೂಚನೆ ಆಗದೇ ಇರುವುದರಿಂದ ಇದನ್ನು ಅಡ್ಮಿಟ್ ಮಾಡಬೇಡಿ ಎಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ ಮೇಲೆ ಸರ್ಕಾರ ಉತ್ತರ ಕೊಡುವುದು ಒಳ್ಳೆಯ ಸಂಪ್ರದಾಯ.

Sri D.B. CHANDRE GOWDA: (Hon'ble Minister for law and Parliamentary Affairs) I would like to intervene as a Parliamentary Affairs Minister and submit to the Chair that it is not admissible on merits.

ಅಕ್ಟೋಬರ್ 6ನೇ ತಾರೀಖು ಕೇಂದ್ರದಲ್ಲಿ ಉಸ್ತುವಾರಿ ಸರ್ಕಾರ ಇತ್ತು. ಅನಿವಾರ್ಯವಾಗಿ 20ನೇ ತಾರೀಖು ಸಂಸತ್ ಸೇರಬೇಕಾಗಿತ್ತು. ಈ ಅನಿವಾರ್ಯತೆ ಕೇಂದ್ರ ಸರ್ಕಾರಕ್ಕೆ ಇದ್ದಾಗಲೂ ಸಹ ಇನ್ನೂ 15 ದಿವಸ ಕಾಯುವಂತಹ ತಾಳ್ಮೆ ಅವರಿಗೆ ಇರಲಿಲ್ಲ. ಅವಸರವಾಗಿ ತಾವು ಮಾಡಿದ್ದೀರೆಂದು ತಾವು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ, ಅದೇ ರೀತಿ ಕೇಂದ್ರದವರು ಮಾಡಿರಬಹುದು. ಕೇಂದ್ರ ಸರ್ಕಾರದವರು 6ನೇ ತಾರೀಖು ಡೀಸೆಲ್ ಬೆಲೆ ಹೆಚ್ಚು ಮಾಡಿದಂಥ ಸಂದರ್ಭದಲ್ಲಿ ಚುನಾವಣೆ ಫಲಿತಾಂಶ ಏನಾಗುತ್ತದೆ ಎಂಬುದು ಸಹ ಅವರಿಗೆ ಗೊತ್ತಿರಲಿಲ್ಲ. ಅಂಥ ದಿವಸಗಳಲ್ಲಿ ಡೀಸೆಲ್ ಬೆಲೆ ಏರಿಸಿದ್ದಾರೆ. ದೇಶದಲ್ಲಿ ಆಗುವಂತಹ ದುರಂತಗಳಿಗೆ ಮೊದಲನೇ ಕಾರಣವೇ ಕೇಂದ್ರ ಸರ್ಕಾರ. ಸಂಸತ್ತಿನ ಮೇಲೆ ನಿಮಗೆ ಗೌರವ ಇದ್ದಿದ್ದರೆ ಅವರು 15 ದಿವಸ ಕಾಯಬೇಕಾಗಿತ್ತು. ಹೊಸ ಸಂಸತ್, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಸದನ ಸೇರಿದ ಮೇಲೆ ಇದನ್ನು ಮಾಡಬೇಕೆಂಬ ಕಲ್ಪನೆ ತಮಗೆ ಇಲ್ಲದೇ ತಾವು ನಮಗೆ ಬುದ್ಧಿ ಹೇಳುವುದು ಸರಿಯಿಲ್ಲವೆಂದು ಮಾನ್ಯ ಸದಾನಂದಗೌಡರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಇದನ್ನು ಏಕಾಏಕಿ ಏರಿಸಿಲ್ಲ. ನಾನು ಮಾನ್ಯ ಸಾರಿಗೆ ಮಂತ್ರಿಗಳ ವ್ಯವಹಾರಕ್ಕೆ ಹೋಗುವುದಿಲ್ಲ. ಡೀಸೆಲ್ ಬೆಲೆ ಏರಿದ ಮೇಲೆ ತತ್‌ಕ್ಷಣ ನಮ್ಮ ಮೊದಲನೇ ಕ್ಯಾಬಿನೆಟ್ ಸಭೆಯಲ್ಲಿ ಈ ವಿಷಯವನ್ನು ಚರ್ಚೆಮಾಡಿ ಅನಿವಾರ್ಯವಾಗಿ ಇದನ್ನು ಏರಿಸಲೇಬೇಕೆಂಬ ಪ್ರಸಂಗ ಇದ್ದರೂ ಕೂಡ ಸಂಪ್ರದಾಯವನ್ನು ಮೀರಬಾರದೆಂದು ಮಾನ್ಯ ಮುಖ್ಯಮಂತ್ರಿಗಳು ಸೌಜನ್ಯ ದೃಷ್ಟಿಯಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು, ಡೀಸೆಲ್ ಬೆಲೆ ಏನಾದರೂ ಸಾಧ್ಯವಿದ್ದರೆ ಕಡಿಮೆ ಮಾಡಬೇಕೆಂದು ತಿಳಿಸಿದ್ದಾರೆ. ಇದರಿಂದ ಬಡವರಿಗೆ ಹೆಚ್ಚು ತೊಂದರೆಯಾಗಿದೆ ಎಂದು ನೀವೆಲ್ಲಾ ಏನು ಪ್ರಾರ್ಥನೆ ಮಾಡುತ್ತಿದ್ದೀರಿ, ಅದೇ ರೀತಿ ನಾವು ಸಹ ಕೇಂದ್ರಸರ್ಕಾರಕ್ಕೆ ಪ್ರಾರ್ಥನೆ ಮಾಡಿ

ಡೀಸೆಲ್ ಬೆಲೆ ಜಾಸ್ತಿಯಾಗಿದೆ, ಸ್ವಲ್ಪ ಕಡಿಮೆ ಮಾಡಿ ಎಂದು, ಮಾನ್ಯ ರಂಗನಾಥರವರು ಈಗಾಗಲೇ ಹೇಳಿದ ಹಾಗೆ ಅವರ ಮನಮುಟ್ಟುವಂತಹ ರೀತಿಯಲ್ಲಿ ನಾವು ಪ್ರಾರ್ಥನೆ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಏನು ಅನಿವಾರ್ಯತೆ ಇತ್ತೋ, ಅದೇ ಅನಿವಾರ್ಯತೆ ನಮಗೂ ಸಹ ಇತ್ತು. ವಿಧಿ ಇಲ್ಲದೇ ಬಸ್ ದರವನ್ನು ಏರಿಸಿದ್ದೇವೆ. ಇದರ ಬಗ್ಗೆ ಮಾನ್ಯ ಸಾರಿಗೆ ಸಚಿವರು ವಿವರಣೆ ಕೊಡುತ್ತಾರೆ, ಆದ್ದರಿಂದ ನಾನು ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ಈ ಸದನವನ್ನು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳಬೇಕು, ಹಾಗೆಯೇ ಸಂಸದೀಯ ನಡವಳಿಕೆಗಳು ಚೆನ್ನಾಗಿರಬೇಕೆಂದು ತಾವು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ. ಅದಕ್ಕಾಗಿ ಕೇಂದ್ರ ಸರ್ಕಾರದವರು ಏನು ಮಾದರಿಯನ್ನು ಹಾಕಿಕೊಂಡಿದ್ದಾರೆಯೋ, ಅದೇ ಮಾದರಿಯಲ್ಲಿ ನಾವು ಸಹ ಮಾಡಿದ್ದೇವೆ ಹೊರತು ಬೇರೇನು ಮಾಡಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:- ಎಲ್ಲ ದರಲ್ಲಿಯೂ ಮಾಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ:- ಸಮಯ ಬಂದಾಗ ನೋಡೋಣ. ಏಕೆಂದರೆ ತಾವು ಪಾರ್ಲಿಮೆಂಟರಿ ಅಫೇರ್ಸ್‌ನ್ನು ಅಭ್ಯಾಸ ಮಾಡಿದ್ದೀರಿ, ತಾವು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರಿಂದ ನಾನು ಈ ರೀತಿ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ಮಾತುಮಾತಿಗೂ ಈ ರೀತಿ ಕಾಲು ಎಳೆಯುವಂತಹ ಕೆಲಸ ಮಾಡುವುದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಕಾಲು ಎಳೆಯುವಂತಹ ಕೆಲಸ ಮಾಡುತ್ತಿಲ್ಲ. ವಸ್ತು ಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ನಾನು ಒಂದು ಸಲ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಕ್ಕೆ ತಾವು ಪದೇ ಪದೇ ಅದನ್ನೇ ಪ್ರಸ್ತಾಪ ಮಾಡುತ್ತಿದ್ದೀರಿ ಏಕೆ?

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಹೇಳಿದ್ದಕ್ಕೆ ನಾನು ಉತ್ತರ ಹೇಳುತ್ತಿದ್ದೇನಷ್ಟೆ. ಇದನ್ನು ಕಾಲು ಎಳೆಯುತ್ತಿದ್ದೀರೆಂದು ತಾವೇಕೆ ತಿಳಿದುಕೊಳ್ಳುತ್ತಿದ್ದೀರಿ? ನೀವು ಕೇಳಿದ ಪಾಯಿಂಟ್ ಆಫ್ ಆರ್ಡ್‌ಗೆ ನಾನು ಉತ್ತರ ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್:- ತಾವು ಮಾತನಾಡತಕ್ಕಂಥ ವ್ಯಂಗ್ಯಾರ್ಥಗಳನ್ನು ಅರ್ಥ ಮಾಡಿಕೊಳ್ಳತಕ್ಕಂಥ ಸಂವೇದನ ಶೀಲತೆ ನಮಗೆ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:-ಇದೆಲ್ಲಾ ಇರುವುದರಿಂದಲೇ ನಿಮ್ಮ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಇದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷ:- ಇನ್ನು 15 ನಿಮಿಷದಲ್ಲಿ ತಾವೆಲ್ಲರೂ ಮಾತನಾಡುವುದನ್ನು ಮುಗಿಸಬೇಕು, ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಇದು ಆಡಳಿತಾತ್ಮಕವಾದ ವೆಚ್ಚವನ್ನು ಭರಿಸುವುದಕ್ಕೋಸ್ಕರ ಸರ್ಕಾರ ತೆಗೆದುಕೊಂಡಿರತಕ್ಕಂಥ ತೀರ್ಮಾನವಾಗಿದೆ. ಇದಕ್ಕೆ ಯಾವ ಪಾಲಿಸಿ ಮ್ಯಾಟರ್ ಇಲ್ಲ ಆಡಳಿತಾತ್ಮಕವಾದಂಥ ತೀರ್ಮಾನ ತೆಗೆದುಕೊಳ್ಳುವಂತಹ ಕಾಲಕ್ಕೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎನ್ನುವಂತಹ ಮಾತು ಹೊಸ ಸಂಪ್ರದಾಯ ಎನ್ನತಕ್ಕಂಥದ್ದು ಮಾನ್ಯ ಸಿಂಧ್ಯಾರವರು ಒಪ್ಪುತ್ತೀರಾ? ಬೇರೆಯವರು ಒಪ್ಪುತ್ತಾರೆಯೋ, ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಮಾನ್ಯ ಸಿಂಧ್ಯರವರು ನನ್ನ ಜೊತೆ ಉಪ ನಾಯಕರಾಗಿದ್ದರು. ಆದ್ದರಿಂದ ಇವತ್ತು ಆಡಳಿತಾತ್ಮಕವಾದಂಥ ವೆಚ್ಚವನ್ನು ಏರಿಸಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ:- ನಾನು ಮಲ್ಲಿಕಾರ್ಜುನ ಖರ್ಗೆಯವರು ಇದನ್ನು ಒಪ್ಪುತ್ತಾರೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಪ್ಪಿರುವುದರಿಂದಲೇ ಅವರು ಇಲ್ಲಿ ಕುಳಿತುಕೊಂಡಿದ್ದಾರೆ, ಅವರೇನಾದರೂ ಒಪ್ಪಿಕೊಳ್ಳದಿದ್ದರೆ ಅಲ್ಲಿ ಇರುತ್ತಿದ್ದರು. ನಾನು ಎಲ್ಲವನ್ನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದೊಂದು ಸಾಧಾರಣ ಆಡಳಿತಾತ್ಮಕವಾಗಿರುವುದರಿಂದ, ಇದನ್ನು ಅನಿವಾರ್ಯವಾಗಿ ಸರ್ಕಾರ ಮಾಡಲೇಬೇಕಾದಂಥ ತೀರ್ಮಾನಕ್ಕೆ ಬಂದಿದೆ. ಆದ್ದರಿಂದ ಇದು ನಿಯಮ 61ರಲ್ಲಿ ಬರುವುದಿಲ್ಲ. ಒಂದು ವೇಳೆ ತಾವು ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ಇದಕ್ಕೆ ಬೇರೆ ಬೇರೆ ಮಾರ್ಗಗಳಿವೆ, ಆದ್ದರಿಂದ ನಾನೇನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. It shall not become an Adjournment Motion to be taken up seriously on the floor of the House.

ಒಂದು ವೇಳೆ ಇದು ಚರ್ಚೆಗೆ ಯೋಗ್ಯವಾಗಿದ್ದರೆ, ನಿಯಮ 69ರಲ್ಲಿ ತೆಗೆದುಕೊಳ್ಳಬಹುದು, ಹಾಗೆಯೇ ಬೇರೆ ಬೇರೆ ರೀತಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ ಮತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಬಹುದು. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೇ ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:-ಮಾನ್ಯ ಸೋಮಣ್ಣನವರೇ, ತಾವು ಐದು ನಿಮಿಷದೊಳಗೆ ತಮ್ಮ ಭಾಷಣವನ್ನು ಮುಗಿಸಬೇಕು. ಏಕೆಂದರೆ, ಈಗಾಗಲೇ ನಿಮ್ಮ ಕಡೆಯಿಂದ ಇಬ್ಬರು

ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು 10 ನಿಮಿಷದಲ್ಲಿ ಉತ್ತರ ಕೊಟ್ಟರೆ ಈ ವಿಷಯವನ್ನು 20 ನಿಮಿಷದೊಳಗೆ ಮುಗಿಸೋಣ. ಆದ್ದರಿಂದ ಹೆಚ್ಚಿಗೆ ಚರ್ಚೆ ಮಾಡುವುದು ಬೇಡ.

+ ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ):-ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಮಾಡಿದಂಥ ತಪ್ಪಿನಿಂದ ರಾಜ್ಯ ಸರ್ಕಾರವು ಕೂಡ ಅದೇ ದಾಟಿಯಲ್ಲಿ, ಸರಿಯಾದಂಥ ಮಾನದಂಡವನ್ನು ಉಪಯೋಗಿಸದೇ ಕೆಲವು ಹಂತದಲ್ಲಿ ಮಧ್ಯಮವರ್ಗದವರಿಗೆ ಮತ್ತು ಬಡವರಿಗೆ ಹೆಚ್ಚಿನ ಹೊರೆಯನ್ನು ಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಕೇಂದ್ರದಲ್ಲಿ ಉಸ್ತುವಾರಿ ಸರ್ಕಾರ ಇದ್ದಂಥ ಸಂದರ್ಭದಲ್ಲಿ ತೆಗೆದುಕೊಂಡ ನಿರ್ಧಾರದಿಂದ ಡೀಸೆಲ್ ಉಪಯೋಗಿಸತಕ್ಕಂಥ ಕೋಟ್ಯಾಂತರ ಜನರಿಗೆ ತೊಂದರೆಯಾಗಿದೆ. ಅದನ್ನು ಇಲ್ಲಿಯೂ ಕೂಡ ಯಥೇಚ್ಛವಾಗಿ ಮಾಡಿರತಕ್ಕಂಥದ್ದು ಸರಿಯಲ್ಲವೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇವತ್ತು ಸರಿಯಾದಂಥ ಮಾನದಂಡವನ್ನು ಉಪಯೋಗಿಸಿಲ್ಲ ಎಂಬುದಕ್ಕೆ ಒಂದು ಉದಾಹರಣೆ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಜೊತೆಗೆ ಬೆಂಗಳೂರು ನಗರದ ಬಿ.ಎಂ.ಟಿ.ಸಿ.ಯನ್ನು ಸಹ ಸೇರಿಸಿದಾಗ ಡೀಸೆಲ್‌ಗೆ ಸುಮಾರು 270 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ 270 ಕೋಟಿ ರೂಪಾಯಿಗಳಲ್ಲಿ ಹೊಸದಾಗಿ ಹೊರೆ ಬರತಕ್ಕಂಥದರಲ್ಲಿ ಸುಮಾರು 100 ಕೋಟಿ ರೂಪಾಯಿಗಳು. ಇದರಲ್ಲಿ ನೌಕರರ ಡಿ.ಎ. 8 ರಿಂದ 10 ಕೋಟಿ ರೂಪಾಯಿಗಳನ್ನು ಸೇರಿಸಿದರೂ ಸಹ ಸುಮಾರು 110 ಕೋಟಿ ರೂಪಾಯಿಗಳಷ್ಟು ಅಧಿಕ ಹೊರೆ ಬರುತ್ತದೆ. 1998-99ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಟರ್ನ್-ಓವರ್ 1200 ಕೋಟಿ ರೂಪಾಯಿಗಳಷ್ಟು ಇತ್ತು. ಈ 1200 ಕೋಟಿ ರೂಪಾಯಿಗಳಲ್ಲಿ ಶೇಕಡ 10ರಷ್ಟು ಅಂದರೆ, 120 ಕೋಟಿ ರೂಪಾಯಿಗಳಾಗುತ್ತದೆ, ಇಲ್ಲಿ ಏನಾಗಿದೆ ಎಂದರೆ, ಕೆಲವು ಹಂತದಲ್ಲಿ ಶೇಕಡ 16, 30 ರಿಂದ 32ರಷ್ಟು ಬಸ್ ದರವನ್ನು ಏರಿಸಿದ್ದೀರಿ, ಒಟ್ಟಾರೆ ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಶೇಕಡ 27ರಷ್ಟು ಜಾಸ್ತಿ ಮಾಡಿರತಕ್ಕಂಥ ಭಾವನೆ ನನಗೆ ಇದೆ. ಇದನ್ನು ಸರಿ ಮಾಡುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಾರಿಗೆ ಸಚಿವರು ದಯಮಾಡಿ ಚರ್ಚೆ ಮಾಡಬೇಕು. ಈಗಾಗಲೇ ಮಾನ್ಯ ಸಿಂಧ್ಯರವರು ಪ್ರಸ್ತಾಪ ಮಾಡಿದಂತೆ ಅದನ್ನು ಮಾಡಬೇಕಾಗುವ ಅವಶ್ಯಕತೆ ಇದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವತ್ತು ಒಂದು ದೊಡ್ಡ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಆದಂತಹ ಒಂದು ಪರಂಪರೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. 1996-97ರಲ್ಲಿದ್ದಂಥ ಅಂದಿನ ಸರ್ಕಾರ ಶೇಕಡ 30ಕ್ಕೂ ಮೇಲ್ಪಟ್ಟು ಬಸ್ ದರವನ್ನು ಜಾಸ್ತಿ ಮಾಡಿದ್ದಾರೆ. ಇವತ್ತು ಕೇಂದ್ರ ಸರ್ಕಾರ ಮಾಡಿದ್ದಾರೆಂದು ತಾವು ಮಾಡಿದ್ದೀರಿ. ತಮ್ಮ ಮೂಲಕ ಮಾನ್ಯ ಸಾರಿಗೆ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗಲೂ ಕೂಡ ಕಾಲ ಮಿಂಚಿಲ, ತಾವು ಪ್ರತಿಯೊಂದು

ಸ್ಟೇಜಿಗೆ 1 ಪೈಸೆ, 2 ಪೈಸೆ, ಹಾಗೆಯೇ 3.26 ಪೈಸೆ, 3.27, 1.17, 1.19 ಪೈಸೆ ಅಷ್ಟು ಜಾಸ್ತಿ ಮಾಡಿರುವುದರಿಂದ ಇವತ್ತು ಪಟ್ಟಣದಲ್ಲಿ ಮತ್ತು ಹಳ್ಳಿಗಾಡಿನಲ್ಲಿರತಕ್ಕಂಥ ಜನರಿಗೆ ಚಿಲ್ಲರೆಗೆ ತೊಂದರೆಯಾಗುತ್ತದೆ, ಹಾಗೆಯೇ ಚಿಲ್ಲರೆಯನ್ನು ಸರಿಯಾಗಿ ಕೊಡತಕ್ಕಂಥ ವ್ಯವಸ್ಥೆ ಕೂಡ ಇವತ್ತು ಇಲ್ಲ. ಇದಕ್ಕಾಗಿ ತಾವು ಯಾವುದಾದರೊಂದು ಮಾನದಂಡವನ್ನು ಉಪಯೋಗಿಸಿ ಕನಿಷ್ಟ 110ಕೋಟಿ ರೂಪಾಯಿಗಳಷ್ಟು ಆಗುವಂತಹ ಹೊರೆಯನ್ನು ಸರಿಪಡಿಸುವುದಕ್ಕಾಗಿ ತಾವು ಚಿಂತನೆ ಮಾಡಬೇಕು. 220 ಕೋಟಿ ರೂಪಾಯಿಗಳಷ್ಟು ಡೀಸೆಲ್ ಬೇಕಾಗಿರತಕ್ಕಂಥ ಮುಂದಿನ ದಿನಗಳಲ್ಲಿ ಎಷ್ಟು ಜಾಸ್ತಿ ಮಾಡಿದರೆ ಇದು ಸರಿ ಹೋಗುತ್ತದೆ ಎನ್ನುವುದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆದ್ದರಿಂದ, ತಾವು ದಯಮಾಡಿ ಒಂದು ಸಲ ಅದನ್ನು ನೋಡಬೇಕು.

12.30 ಪಿ.ಎಂ

ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮಲ್ಲಿ ಕ್ಯಾನ್ಸಲೇಷನ್ ಏನು ಇದೆ, ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಇದೊಂದು ದೊಡ್ಡ ಕಾಯಿಲೆ. ಕಂಡಕ್ಟರ್ ಬಂದಿದ್ದರೆ ಡ್ರೈವರ್ ಬಂದಿರುವುದಿಲ್ಲ, ಡ್ರೈವರ್ ಬಂದಿದ್ದರೆ ಕಂಡಕ್ಟರ್ ಬಂದಿರುವುದಿಲ್ಲ. ಇವರು ಇಬ್ಬರು ಬಂದಿದ್ದರೆ ಯಾವುದೇ ಒಂದು ಕುಟುಂಬ ನೆಪವನ್ನು ಹಾಕಿ ಅನೇಕ ಬಸ್ಸುಗಳನ್ನು ರದ್ದುಗೊಳಿಸುತ್ತಾರೆ. ಇವೆಲ್ಲವು ಕೂಡ ಇದರಲ್ಲಿ ಸೇರಿಕೊಳ್ಳುತ್ತವೆ. ಇದರಲ್ಲಿ ಏನು ಸೇರಿದೆ ಎನ್ನುವುದಕ್ಕೆ ಒಂದು ಉದಾಹರಣೆ, ಬೆಂಗಳೂರು ನಗರಕ್ಕೆ ಒಂದು ಬಿಎಂಟಿಸಿಯನ್ನು ಆಡಳಿತದಲ್ಲಿ ಇದ್ದ ನಮ್ಮ ಸರ್ಕಾರ ಹಿಂದೆ ಮಾಡಿತ್ತು. ಅದನ್ನು ಏನಾದರೂ ಮಾಡಿ ಚಾಲನೆ ಮಾಡಿ ನಷ್ಟವನ್ನು ಭರಿಸಬೇಕು, ನಷ್ಟ ಯಾವುದೇ ಕಾರಣಕ್ಕೆ ಬರಬಾರದು ಎನ್ನುವ ಒಂದು ಯೋಜನೆಯನ್ನು ಇಟ್ಟುಕೊಂಡು, ಕೆಲವು ಖಾಸಗಿ ಬಸ್ಸುಗಳನ್ನು ಈ ಬಿಎಂಟಿಸಿ ಗೆ ಆಳವಡಿಸಿ ಕೊಟ್ಟಂಥ ಸಂದರ್ಭದಲ್ಲಿ ಬೆಂಗಳೂರಿನ ಬಹುತೇಕ ಕೆಲವೊಂದು ಬಸ್ ಡಿಪೋಗಳಿಗೆ ಸನ್ಮಾನ್ಯ ಸಚಿವರು ದಿಢೀರನೆ ಹೋದರೆ ಗೊತ್ತಾಗುತ್ತದೆ; ಪ್ರತಿಯೊಂದು ಬಸ್ ಡಿಪೋದಲ್ಲಿ ಕನಿಷ್ಟ 15-20 ಬಸ್ಸುಗಳು ಅನಾವಶ್ಯಕವಾಗಿ ಕೆಟ್ಟು ನಿಂತಿರುತ್ತವೆ. ಖಾಸಗಿ ಬಸ್ಸುಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಎಂಟುವರೆ ರೂಪಾಯಿಗಳಿಗೆ ಮಾಡುತ್ತೇವೆಂದು ಅರ್ಜಿಯನ್ನು ಕೊಟ್ಟರೆ ಡೀಸೆಲ್ ಬೆಲೆ ಜಾಸ್ತಿಯಾಗುವುದಕ್ಕೆ ಮುಂಚೆ, ನಮ್ಮ ಅಧಿಕಾರಿಗಳು ಅಗ್ರಿಮೆಂಟ್ ಮಾಡುತ್ತಾರೆ, ತದನಂತರ ಅದನ್ನು ಒಂಬತ್ತುವರೆ ರೂ.ಗಳಿಗೆ ಮಾಡುತ್ತಾರೆ. ನಾವು ಸಾರ್ವಜನಿಕರಿಗೆ ಹೊರೆ ಹಾಕುವ ಬದಲಾಗಿ ಈ ಅಡ್ಮಿನಿಸ್ಟ್ರೇಷನ್ ಟೋನ್‌ಅಪ್ ಮಾಡಿ ಎಲ್ಲೆಲ್ಲಿ ಫಿಲ್‌ಫಿರೇಜ್ ಇದೆ ಅದನ್ನು ನಾವು ಕಟಾಫ್ ಮಾಡಿದರೆ ಏನಾಗುತ್ತದೆ ಎನ್ನುವುದಕ್ಕೆ, ಇವತ್ತು ಬೆಂಗಳೂರು ನಗರದಲ್ಲಿ 400 ಬಸ್ಸುಗಳು ಖಾಸಗಿಯಾಗಿ ಓಡಾಡುತ್ತಿವೆ. ಒಂದು ಬಸ್ಸು ಕನಿಷ್ಟ 250 ಕಿ.ಮೀ. ಓಡಿಸಬೇಕೆಂದು ಒಂದು ನಿಬಂಧನೆ ಇದೆ. ಬಹುತೇಕ ಬಸ್ಸುಗಳು 20-30 ಕಿ.ಮೀ. ಮಾತ್ರ ಓಡಿ ಕೆಟ್ಟು ನಿಂತಿರುವ ಆ ಬಸ್ಸುಗಳನ್ನು 250 ಕಿ.ಮೀ. ಓಡಿದೆ ಎಂದು ಸರ್ಟಿಫೈ ಮಾಡುತ್ತಾರೆ. ಇದೊಂದು ಸೋರಿಕೆಗೆ ಕಾರಣ.

ಅಧ್ಯಕ್ಷರು:-ನೀವು ಬಹಳ ಡಿಟೇಲ್ಸ್ ಹೇಳುವುದಕ್ಕೆ ಹೋಗುತ್ತಿದ್ದೀರಿ.

ಶ್ರೀ ವಿ. ಸೋಮಣ್ಣ:-ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಇದನ್ನು ತೆಗೆದುಕೊಳ್ಳುವುದಕ್ಕೆ ಕಾರಣ ಏನಾದರೂ ಇದೆಯೇ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:- ಅಡ್ಜರ್‌ಮೆಂಟ್ ಮೋರ್ಷನ್ ಅಡ್ಮಿಟ್ ಮಾಡಿದ ಮೇಲೆ ನೀವು ಮಾತನಾಡಿ. ನೀವು ಡಿಟೇಲ್ ಆಗಿ ಹೋಗಬೇಡಿ; Not at this state.

ಶ್ರೀ ವಿ. ಸೋಮಣ್ಣ:-ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಈ ಬಗ್ಗೆ ತಮಗೆ ವಿನಂತಿಯನ್ನು ಮಾಡುತ್ತಿದ್ದೇನೆಂದರೆ, ಇವತ್ತು ಇದನ್ನು ಅಡ್ಮಿಟ್ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂದು. ನಮ್ಮಲ್ಲಿ ಒಂದು ಲೋಕಲ್ ಪರ್ಚೇಸ್ ಕಮಿಟಿ ಅಂತ ಇದೆ. ಈ ಲೋಕಲ್ ಪರ್ಚೇಸ್ ಕಮಿಟಿಯಲ್ಲಿ ಆ ಸಂಬಂಧಪಟ್ಟ ಡಿ.ಸಿ. ಇನ್ನೊಬ್ಬರು ಡಿ.ಎಂ.ಇ. ಇರುತ್ತಾರೆ. ಅದಕ್ಕೆ ಯಾವುದೇ ಒಂದು ಮಾನದಂಡ ಇಲ್ಲ. ಅಲ್ಲಿ ತೆಗೆದುಕೊಳ್ಳತಕ್ಕಂಥ ನಿಮ್ಮ ಇಂಜಿನ್ ಆಯಿಲ್ ಏನಿದೆ, ಗೇರ್ ಬಾಕ್ಸ್ ಆಯಿಲ್ ಏನಿದೆ, ಗೇರ್ಸ್ ಮತ್ತು ಸ್ಪೇರ್ಸ್ ಏನಿದೆ. ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಇದ್ದರೆ ಟೆಂಡರ್ ಕರೆಯಬೇಕಾಗುತ್ತದೆ. ಹಾಗೆ ಟೆಂಡರ್ ಕರೆಯಬೇಕೆನ್ನುವ ಒಂದು ದೃಷ್ಟಿಯಿಂದ ಒಂದಕ್ಕೆ ಟೆಂಡರ್ ಕರೆಯಬೇಕಾದರೂ ಸಹ ಅದನ್ನು 50,20,30, ಹಾಗೂ ಒಂದು ಕೋಟಿ ರೂಪಾಯಿಗಳ ಒಳಗಡೆ ಟೆಂಡರ್ ಇಟ್ಟುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಇಲ್ಲಿ ಸೋರಿಕೆ ಮಾಡುತ್ತಿದ್ದಾರೆ. ಈ ಸೋರಿಕೆಯನ್ನು ತಪ್ಪಿಸಿ ಡೀಸೆಲ್ ಬೆಲೆಯಿಂದ ಉಂಟಾಗಿರುವ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇಲ್ಲವೇ, ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತುಂಬಾ ಒಳ್ಳೆಯ ಕ್ರಮವನ್ನು ತೆಗೆದುಕೊಂಡು ಎಲ್ಲಾ ಇಲಾಖೆಗೆ ಕಂಪ್ಯೂಟರೀಕರಣ ಮಾಡುತ್ತೇವೆ ಎನ್ನುವ ತೀರ್ಮಾನವನ್ನು ಮಾಡಿ, ಒಂದು ಹೊಸ ಚಾಲನೆಯನ್ನು ಮಾಡಿರುತ್ತಾರೆ. ಇದರಲ್ಲಿ ಸುಮಾರು 14-16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೆಎಸ್‌ಆರ್‌ಟಿಸಿಯಲ್ಲಿ ಒಂದು ಟಚ್ ಎನ್ನುವ ಕಂಪನಿಯಿಂದ ಪರ್ಚೇಸ್ ಮಾಡಿ ಶ್ರೀ ಕೆಂಗಲ್ ಹನುಮಂತಯ್ಯನವರ ರಸ್ತೆಯ ಮೂರನೇ ಮಹಡಿಯಲ್ಲಿ ಎಲ್ಲೋ ಒಂದು ಕಡೆ ಡಂಪ್ ಮಾಡಿದ್ದಾರೆ, ತಾವು ಹೋಗಿ ನೋಡಿ.

ಅಧ್ಯಕ್ಷರು:-ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇದರ ಬಗ್ಗೆ ಚರ್ಚೆ ಮಾಡಿ; Not at this state.

ಶ್ರೀ ವಿ. ಸೋಮಣ್ಣ:-ಮಾನ್ಯ ಅಧ್ಯಕ್ಷರೆ, ಇವತ್ತು ಸರಿಯಾದ ಒಂದು ಮಾನದಂಡ ಇಲ್ಲದೆ, ಕೇಂದ್ರ ಸರ್ಕಾರ, ಇಡೀ ರಾಜ್ಯದ, ರಾಷ್ಟ್ರದ ವ್ಯಾಪ್ತಿಗೆ ಒಳಪಡಿಸಿದರೆ, ಕರ್ನಾಟಕದಲ್ಲಿರತಕ್ಕಂಥ ಮಧ್ಯಮ ವರ್ಗದವರಿಗೆ, ಕಡು ಬಡವರಿಗೆ ತೊಂದರೆಯಾಗುತ್ತದೆ. ಈ ಸೋರಿಕೆಯನ್ನು ತಪ್ಪಿಸುವಂಥ ಸಂದರ್ಭದಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ

ಒಂದು ಕಿ.ಮೀ.ಗೆ 2-3 ಸ್ಟೇಜುಗಳು ಕೆಲವು ಕಡೆ ಬರುತ್ತವೆ. ವಿಜಯನಗರ-ಬೆಂಗಳೂರು ಕೇಂದ್ರ ಬಸ್ ನಿಲ್ದಾಣ 5 ರಿಂದ ಐದುವರೆ ಕಿ.ಮೀ., ಐದುವರೇ ಕಿ.ಮೀ.ಗಳನ್ನು ಇವರು ಸುಮಾರು 8-10 ಪಾಯಿಂಟ್‌ಗಳನ್ನು ಇಟ್ಟುಕೊಳ್ಳುತ್ತಾರೆ. ಸುಮಾರು ಅರ್ಧ ಕಿ.ಮೀ.ಗಿಂತ ಕಡಿಮೆ ಇರತಕ್ಕಂಥದ್ದನ್ನು 15 ಪೈಸೆ ಇದ್ದರೆ, ಅದು ಮುಂದಿನ ಸ್ಟೇಜಿನಲ್ಲಿ 35-40 ಪೈಸೆ ಹೆಚ್ಚಿಗೆ ಆಗುತ್ತದೆ. ಇವರು ನಿರ್ದಿಷ್ಟವಾದ ಹಾಗೂ ನಿಖರವಾದ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ, ಅದು ಸಾರ್ವಜನಿಕರ ಟೀಕೆ ಟಿಪ್ಪಣಿಗಳಿಗೆ ಗುರಿಯಾಗತಕ್ಕಂಥದ್ದು, ಅನೇಕ ವಿಧದಲ್ಲಿ ಸೋರಿಕೆಯಾಗುವುದನ್ನು ತಪ್ಪಿಸುವಂಥ ವ್ಯವಸ್ಥೆಗಳು ಗೊತ್ತಿದ್ದರೂ ಕೂಡ ಕೆಎಸ್‌ಆರ್‌ಟಿಸಿ ಎಲ್ಲೋ ಒಂದು ಕಡೆ ಸ್ವಲ್ಪ ಎಡವಿದೆ. ತಾವು ಹೊಸದಾಗಿ ಬಂದಿರುತ್ತೀರಿ, ತಮಗೆ ಇದರ ಬಗ್ಗೆ ಅನುಭವ ಇದೆ. ನಾನು ಈ ಮೂಲಕವಾಗಿ ಸರ್ಕಾರದವರಲ್ಲಿ ವಿನಂತಿ ಮಾಡುವುದಿಷ್ಟೆ, ಯಾವುದೇ ಕಾರಣಕ್ಕೆ, ಯಾರೋ ಮಾಡಿದ ತಪ್ಪಿಗೆ ಯಾರಿಗೋ ಬರೆ ಹಾಕುವಂಥ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸಾರ್ವಜನಿಕರಿಂದ ಯಾವುದೇ ನೆಪದಲ್ಲಿ ವಸೂಲು ಮಾಡತಕ್ಕಂಥದ್ದು ಸರಿಯಾದುದಲ್ಲ. ಇದನ್ನು ಯಾವ್ಯಾವ ಹಂತದಲ್ಲಿ ಕಡಿಮೆ ಮಾಡಬಹುದು ಎನ್ನುವುದರ ಬಗ್ಗೆ ಒಂದು ಕಠಿಣವಾದ ಕ್ರಮವನ್ನು ತೆಗೆದುಕೊಂಡಾಗ ಮಾತ್ರ ಸೋರಿಕೆಯನ್ನು ತಡೆಗಟ್ಟಬಹುದು. ಇವೆಲ್ಲವನ್ನು ಕೂಡ ತಾವು ಮನಸ್ಸಿಲ್ಲಿಟ್ಟುಕೊಂಡು ಈ ದರ ಏನಿದೆ ನಿಗದಿ ಮಾಡಿರುವುದು ಅದನ್ನು ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆದ್ದರಿಂದ ದಯಮಾಡಿ ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಅನುಭವಶಾಲಿಗಳಾದ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇರುವುದರಿಂದ, ಹಾಗೂ ಸಂಬಂಧಪಟ್ಟ ಸಚಿವರು ಇರುವುದರಿಂದ ಇದನ್ನು ತೀರ್ಮಾನ ಮಾಡುವುದರಿಂದ ತಮಗೆ ಒಳ್ಳೆಯ ಹೆಸರು ಬರುತ್ತದೆಯೇ ವಿನಹ ನಮಗೆ ಏನಲ್ಲ. ದಯವಿಟ್ಟು ತಾವು ಮತ್ತೊಮ್ಮೆ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಇದಕ್ಕೆ ಸದನ ಸಮಿತಿಯಾಗಲಿ ಮತ್ತೊಂದು ಸಮಿತಿಯನ್ನಾಗಲಿ ಮಾಡುವುದರಿಂದ, ಅಂತಹ ತೀಕ್ಷ್ಣವಾದ ಸಾರ್ವಜನಿಕರಿಗೆ ಅದರ ಹೊರೆಯನ್ನು ಅಲ್ಲಿಯವರೆಗೆ ಹೊರತಕ್ಕಂಥದ್ದು ಸಮಂಜಸವಲ್ಲ. ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ; ದಿಢೀರನೆ ಇದನ್ನು ಪ್ರಕಟ ಮಾಡಿ ಸಾರ್ವಜನಿಕರಲ್ಲಿರತಕ್ಕಂಥ ಭಾವನೆಗಳಿಗೆ ಸ್ವಲ್ಪವಾದರೂ ಸ್ಪಂದಿಸಬೇಕೆಂದು ಹೇಳುವ ಒಂದು ಮನವಿಯನ್ನು ತಮ್ಮ ಮೂಲಕ ನಾನು ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾರಣ ಈಗಾಗಲೇ ಮಾತನಾಡಿರತಕ್ಕಂಥವರು ತಮ್ಮನ್ನು ಕನ್‌ವಿನ್ಸ್ ಮಾಡುವುದರಲ್ಲಿ ಸಾಕಷ್ಟು ವಿಚಾರಗಳನ್ನು ಈಗಾಗಲೇ ಪ್ರಸ್ತಾಪ ಮಾಡಿರುತ್ತಾರೆ. ತಮ್ಮನ್ನು ನೋಡಿದಾಗ ತಾವು ನಿಲುವಳಿ ಸೂಚನೆಗೆ ಬೆಂಬಲವನ್ನು

ಕೊಟ್ಟು ಚರ್ಚೆಗೆ ಇಟ್ಟುಕೊಳ್ಳುವ ತೀರ್ಪನ್ನು ತಾವು ಕೊಡುತ್ತೀರೆಂದು ನನಗೆ ಅನಿಸುತ್ತದೆ. ಏಕೆಂದರೆ, ಕರ್ನಾಟಕ ರಾಜ್ಯದ ಬಹಳ ಜನ ಬಡವರ ಮತ್ತು ಸಾಮಾನ್ಯ ಜನರ ಸಮಸ್ಯೆ ಇದು. ಇದರ ಬಗ್ಗೆ ತಮಗೆ ಕಳಕಳಿ ಇದೆ. ಆದರ ಸಲುವಾಗಿ ಇದನ್ನು ಸಹಜವಾಗಿ ಕೊಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಮೊನ್ನೆ ಮೊನ್ನೆ ಚುನಾವಣೆ ಮುಗಿದಿದೆ. ನಮ್ಮ ಕಾಂಗ್ರೆಸ್ ಮಿತ್ರರು ಬಡವರ, ದುರ್ಬಲವರ್ಗದವರ ಅಧಿಕೃತ ವಾರಸುದಾರರು ಎಂದು ಹೇಳಿಕೊಂಡು, ನಮ್ಮ ಕಾಂಗ್ರೆಸ್ ಸರ್ಕಾರ ಬಂದರೆ ನಿಮ್ಮ ಎಲ್ಲ ಬೆಲೆಗಳು ಇಳಿಯುತ್ತವೆ; ನಿಮಗೆ ಸುಖ, ಶಾಂತಿ, ಸಮೃದ್ಧಿ ಬರುತ್ತದೆಂದು ಹೇಳಿಕೊಂಡು ಬಂದವರು. ಅವರು ಜನತೆಗೆ ಹೇಳಿಕೊಂಡು ಬಂದು ಈ ಸೀಟಿನಲ್ಲಿ ಕುಳಿತುಕೊಳ್ಳುವುದರೊಳಗಾಗಿಯೇ ಸಾಮಾನ್ಯ ಜನರಿಗೆ ಇವರು ಪ್ರಹಾರ ಮಾಡಿದ್ದಾರೆ. ಹಾಗಾಗಿ ಸಾಮಾನ್ಯ ಜನರು ಖಂಡಿತವಾಗಿ ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮ ಸಂಖ್ಯೆಯ ದೃಷ್ಟಿಯಿಂದ ನೀವು ಇಲ್ಲಿ ಏನು ಬೇಕಾದರೂ ಹೇಳಬಹುದು. ಮತ್ತು ಅದನ್ನು ಇಲ್ಲಿ ನಿರ್ವಹಿಸಿಕೊಂಡು ಹೋದರೂ ಹೊರಗಡೆ ಇರುವ ಜನ ನಿಮ್ಮನ್ನು ಹಾಗೆ ಬಿಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮಾನ್ಯ ಬಚ್ಚೇಗೌಡರು ಹೇಳಿದರು. ನೀವು ಕಾರಿನಲ್ಲಿ ಮತ್ತು ಸ್ಕೂಟರ್‌ನಲ್ಲಿ ತಿರುಗಾಡುವವರಿಗೆ ಏನು ಮಾಡಿದರು ನಡೆದುಕೊಂಡು ಹೋಗುತ್ತದೆ. ಏಕೆಂದರೆ ಅವರ ಆದಾಯ ಇರುತ್ತದೆ ಅವರು ಏನಾದರೂ ಮಾಡುತ್ತಾರೆ. ಆದರೆ ಇವತ್ತು ಯಾರು ಕೃಷಿ-ಕಾರ್ಮಿಕರು, ಸಾಮಾನ್ಯ ಜನರು, ಬಡವರು ಅವರು ಆಸ್ಪತ್ರೆಗೆ ಹೋಗುವುದಕ್ಕೆ ಕಿಸೆಯಲ್ಲಿ ಹಣ ಇರುವುದಿಲ್ಲ, ಅಥವಾ ಜೇಬಿಗೆ ನೀವು ಕೈ ಹಾಕುವುದಕ್ಕೆ ಹೋಗಿದ್ದೀರಿ ಅಂದರೆ ಅವರು ಖಂಡಿತವಾಗಿ ನಿಮ್ಮನ್ನು ಬಿಡುವುದಿಲ್ಲ. ಮಾನ್ಯ ಸಂಸದೀಯ ಸಚಿವರು ಈಗಾಗಲೇ ಹೇಳಿದರು. ನಿಮ್ಮ ಕೇಂದ್ರ ಸರ್ಕಾರ ಮಾಡಿದ್ದು ಏನು ಎಂದು ಹೇಳಿದರು. ಸ್ವಾಮಿ ನಾವು ಹೇಳುವುದಿಷ್ಟೆ, ಈ ಒಂದು ಸದನ ನಡೆಯುತ್ತಿದೆ. ಆಗ ನೀವು ಮಾಡಿರುತ್ತೀರಿ, ಆದರೆ ಕೇಂದ್ರ ಸರ್ಕಾರದವರು ಬೆಲೆ ಜಾಸ್ತಿ ಮಾಡಿದಾಗ ಅಲ್ಲಿ ಸದನ ಸೇರಿರಲಿಲ್ಲ. 1999ನೇ ಫೆಬ್ರವರಿ ಹಾಗೂ 99ನೇ ಸೆಪ್ಟೆಂಬರ್ ನಡುವೆ ತೈಲ ಬೆಲೆ ಮೆಟ್ರಿಕ್ ಟನ್ ಒಂದಕ್ಕೆ 3210 ರೂಪಾಯಿಗಳಿಂದ 7020 ರೂಪಾಯಿಗಳಿಗೆ ಏರಿದೆ, ಅದನ್ನು ಜಾಸ್ತಿ ಮಾಡದೇ ಹೋಗಿದ್ದರೆ ನಮ್ಮ ಸರ್ಕಾರ ಬರುತ್ತಿತ್ತೋ ಇಲ್ಲವೋ ಎನ್ನುವುದು ಅದು ಬೇರೆ ಪ್ರಶ್ನೆ. ಬರದೇ ಇದ್ದಿದ್ದರೆ ಇಡೀ ದೇಶದ ಜನ ಅಲ್ಲಿ ಕೊಂಡುಕೊಳ್ಳುವುದಕ್ಕೆ ತೊಂದರೆಯಾಗಿ ಅಲ್ಲಿ ತೈಲ ಉತ್ಪನ್ನಗಳನ್ನು ಪಡೆದುಕೊಳ್ಳಲು ಹಣ ಸಂದಾಯ ಮಾಡಲು ಸರ್ಕಾರದ ತೈಲ ಸಂಸ್ಥೆಗಳು ತೊಂದರೆ ಎದುರಿಸಿ ಸರಬರಾಜು ಮಾಡುವುದರಲ್ಲಿ ವಿಫಲವಾಗಿದ್ದರೆ, ಇಡೀ ದೇಶದಲ್ಲಿ ದೊಡ್ಡ ಗಡಿಬಿಡಿ ಸರಬರಾಜು ಮಾಡುವುದರಲ್ಲಿ ವಿಫಲವಾಗಿದ್ದರೆ, ಇಡೀ ದೇಶದಲ್ಲಿ ದೊಡ್ಡ ಗಡಿಬಿಡಿ ನಿರ್ಮಾಣವಾಗುತ್ತಿತ್ತು. ಇದರ ಮುಂಜಾಗ್ರತೆ ಕ್ರಮವಾಗಿ ಅದನ್ನು ಮಾಡಿದ್ದಾರೆ, ಅದಕ್ಕಾಗಿ ನಾವು ಅಭಿನಂದಿಸಬೇಕಾಗುತ್ತದೆ. ಇವತ್ತು ನೀವು ಏನು ಮಾಡಿದ್ದೀರೆಂದರೆ, ಸದನ ಸೇರಿ ಇವತ್ತು ಸಭೆ ನಡೆಯುತ್ತಿರುವಾಗ

ಏಕಪಕ್ಷೀಯವಾಗಿ ನೀವು ನಿರ್ಧಾರ ತೆಗೆದುಕೊಂಡು ಘೋಷಣೆ ಮಾಡಿರುತ್ತೀರಿ. ನೀವು ಜಾಸ್ತಿ ಮಾಡಬೇಡಿ ಎಂದು ಹೇಳಿ ಆ ಒಂದು ಕೆಎಸ್ಆರ್‌ಟಿಸಿ ಸಂಪೂರ್ಣವಾಗಿ ನಾಶವಾಗಿ ಹೋಗಲಿ ಎನ್ನುವಂಥವರು ನಾವುಗಳಲ್ಲ. ನಮಗೂ ಜವಾಬ್ದಾರಿ ಇದೆ, ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೆ ಎಂದಕ್ಷಣ ಎಲ್ಲದಕ್ಕೂ ವಿರೋಧ ಮಾಡುತ್ತೇವೆ ಎಂದು ಅಲ್ಲ. ಕೇಂದ್ರ ಸರ್ಕಾರಕ್ಕೆ ಹೇಗಿದ್ದರೂ ಜನ ಬೈಯ್ಯುತ್ತಾರೆ, ಇದರಲ್ಲಿ ನಾವು ಸ್ವಲ್ಪ ಕಮಾಯಿ ಮಾಡಿದರಾಯಿತು ಎನ್ನುವ ಪ್ರಸಂಗ ನೀವು ಮಾಡಿರುತ್ತೀರಿ. ಅವರು ತೈಲ ಬೆಲೆ ಅಂದರೆ ಡೀಸೆಲ್ ಬೆಲೆಯನ್ನು ಎಷ್ಟು ಏರಿಸಿದ್ದಾರೆ. ಅದರ ಪರ್ಸೆಂಟೇಜಿಗೆ ಅನುಗುಣವಾಗಿ ನೀವು ಬೆಲೆಯನ್ನು ಏರಿಸಿದ್ದರೆ ನಾವು ಹೇಳಬಹುದು, ನೀವು ಇಷ್ಟು ಬೆಲೆಯನ್ನು ಏರಿಸಿ ಕೆಎಸ್ಆರ್‌ಟಿಸಿಯನ್ನು ಉದ್ಧಾರ ಮಾಡುವುದಕ್ಕೆ ಆಗುತ್ತದೆಯೇ? ಒಟ್ಟು 78 ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿವೆ. ಒಟ್ಟಾರೆ ಸಾರ್ವಜನಿಕ ಉದ್ದಿಮೆಗಳ ಮೇಲೆ ನಾವು ಏನು ಬಂಡವಾಳವನ್ನು ಹೂಡಿದ್ದೇವೆ, ಹೆಚ್ಚು ಬಂಡವಾಳ ಹೂಡಿದ್ದರಲ್ಲಿ ಕೆಎಸ್ಆರ್‌ಟಿಸಿ 4ನೇ ದೊಡ್ಡ ಸಂಸ್ಥೆ. 78 ಸಾರ್ವಜನಿಕ ಉದ್ದಿಮೆಗಳಲ್ಲಿ ಹೆಚ್ಚು ನಷ್ಟವನ್ನು ಅನುಭವಿಸುತ್ತಿರುವುದು ಇದು ಮೊದಲನೆಯ ಸ್ಥಾನ. ಮಾನ್ಯ ಸಗೀರ್ ಅಹ್ಮದ್‌ರವರಿಗೆ ನೀವು ಬಸ್‌ನ್ನು ಗುಜರಿಗೆ ಕಳುಹಿಸುವಾಗ ಯಾವ ರೀತಿ ಇರುತ್ತದೆ ಅದಕ್ಕಿಂತ ಕೆಟ್ಟ ಸ್ಥಿತಿ ನಿಮ್ಮ ಕೆಎಸ್ಆರ್‌ಟಿಸಿಯಲ್ಲಿ ಇದೆ. ಹಾಗಾಗಿ ಈ ಬೆಲೆ ಏರಿಸಿದ ಕೂಡಲೇ ಕೆಎಸ್ಆರ್‌ಟಿಸಿಯನ್ನು ಉದ್ಧಾರ ಮಾಡುತ್ತೇವೆ, ಅದರ ನಷ್ಟವನ್ನು ಹೋಗಲಾಡಿಸುತ್ತೇವೆ, ಮಾನ್ಯ ಸಗೀರ್ ಅಹ್ಮದ್‌ರವರಿಗೆ ಒಳ್ಳೆಯ ಹೆಸರು ಬರುತ್ತ ಅಥವಾ ಕಾಂಗ್ರೆಸ್ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎನ್ನುವುದು ಇಲ್ಲ. ಆಡಳಿತದಲ್ಲಿ ದಕ್ಷತೆಯನ್ನು ತರಬೇಕಾಗಿತ್ತು. ಮಾನ್ಯ ಅಧ್ಯಕ್ಷತೆ, ಅದನ್ನು ಮಾಡಲಿಲ್ಲ. ನಮ್ಮ ಹಿರಿಯರು ಈಗಾಗಲೇ ಒಂದು ಅಪಾಯಕಾರಿ ಬೆಳವಣಿಗೆಯನ್ನು ಹೇಳಿದರು. ಪ್ರತಿನಿತ್ಯ ಸುಮಾರು 8200 ಗ್ರಾಮಗಳಿಗೆ ನಮ್ಮ ಕೆಎಸ್ಆರ್‌ಟಿಸಿ ಬಸ್ಸುಗಳು ಹೋಗುತ್ತಿಲ್ಲ. ಖಾಸಗಿಯವರು ನಮ್ಮ ಬಡವರಿಗೆ ಅನುಕೂಲವಾಗುವಂತೆ ಆಯಾಯ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿದ್ದಾರೆ. ನೀವು ಹಿರಿಯಕ್ಕ ಇದ್ದಹಾಗೆ. ನೀವು ಬಸ್ ದರ ಏರಿಸಿದ ಮೇಲೆ ಅವರು ಯದ್ವಾತದ್ವಾ ಏರಿಸಿದ್ದಾರೆ. ನಿಮ್ಮ ಕಂಟ್ರೋಲ್ ಎಲ್ಲಿದೆ ಅವರ ಮೇಲೆ? ನೀವು ಏನಾದರೂ ಹೇಳಿದ್ದೀರಾ ಇಷ್ಟು ಏರಿಸಬೇಕು ಇಷ್ಟು ಏರಿಸಬಾರದೆಂದು? ಸ್ವಾಮಿ ತಾವು ಹೇಳಿದ್ದು 35 ಪರ್ಸೆಂಟ್ ಏರಿಸಬೇಕೆಂದು. ಅವರು ಇನ್ನೂ ಜಾಸ್ತಿ ಏರಿಸಿಕೊಂಡು ಬಿಟ್ಟಿದ್ದಾರೆ. ಅವರಿಗೆ ತಾವು ಮೂಗುದಾರ ಹಾಕಲಿಕ್ಕೆ ಹೋಗುವುದಿಲ್ಲ. ಅವರು ಹೇಳುವುದು ಕೆಎಸ್ಆರ್‌ಟಿಸಿಯವರು ಏರಿಸಿದ್ದಾರೆ, ಅದಕ್ಕೆ ನಾವು ಏರಿಸಿದ್ದೇವೆಂದು. ಯಾರೂ ಹೇಳುವವರು ಕೇಳುವವರು ಇಲ್ಲ. ನಮ್ಮ ಹಳ್ಳಿಯ ಜನ ಏರಿಸಿದ ರೇಟನ್ನು ಕೊಟ್ಟುಕೊಂಡು ನಮ್ಮ ಹಣೆಯಬರಹವೆಂದು ಬಸ್ಸಿನಲ್ಲಿ

ತಿರುಗಾಡುತ್ತಿದ್ದಾರೆ. 'ಅಜ್ಜಿ ನೂತಿದ್ದು ಮೊಮ್ಮಗನ ಉಡಿದಾರಕ್ಕೆ ಸರಿ ಹೋಯಿತು' ಎನ್ನುವ ಗಾದೆಯ ಪ್ರಕಾರ . . . .

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಪ್ರತಿ ಜಿಲ್ಲಾಧಿಕಾರಿಗಳ ಮುಖಾಂತರ ಆರ್‌ಟಿಓಗಳಿಗೆ ದರ ಏರಿಸಲಿಕ್ಕೆ ಪರ್ಮಿಷನ್ ಕೊಟ್ಟಿರುತ್ತಾರೆ. ಇಷ್ಟು ಕಿಲೋಮೀಟರ್‌ಗೆ ಇಷ್ಟು ಪೈಸೆ ಏರಿಸಬೇಕೆಂದು ಇರುತ್ತದೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರಗಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಇವರು ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಬಸ್ಸಿನ ದರವನ್ನು ಏರಿಸಿ ಬಡವರ ಜೇಬಿಗೆ ಕತ್ತರಿ ಹಾಕುವಂತಹ ಕೆಲಸವನ್ನು ಇನ್ನಾದರೂ ಕೈ ಬಿಡಬೇಕೆನ್ನುವಂತಹ ದೃಷ್ಟಿಯಿಂದ ನಾವು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಇದು ಬಹಳ ಗಂಭೀರವಾದ ಸಮಸ್ಯೆ. ನಮ್ಮಲ್ಲಿ ಸಾಕಷ್ಟು ದಾಖಲಾತಿಗಳು ಇವೆ. ಸಮಯದ ಅಭಾವವಿರುವುದರಿಂದ ನನಗೆ ಎರಡು ಮೂರು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ತಮ್ಮ ಆದೇಶವನ್ನು ನಾನು ಉಲ್ಲಂಘನೆ ಮಾಡುವುದಿಲ್ಲ. ಏಕೆಂದರೆ ತಮಗೆ ಸಮಯದ ಇತಿಮಿತಿಗಳು ಇರುವುದರಿಂದ ನಾನು ಹೇಳುತ್ತಿದ್ದೇನೆ. ಈಗಾಗಲೇ ಇದು ಪಾಲಿಸಿ-ಮ್ಯಾಟರ್ ಅಲ್ಲ, ಇದು ಅಡ್ಮಿನಿಸ್ಟ್ರೆಟಿವ್ ಮ್ಯಾಟರ್ ಎಂದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಚಂದ್ರೇಗೌಡರು ಹೇಳಿರುವುದರಿಂದ, ಇದು ಪಾಲಿಸಿ ಮ್ಯಾಟರೇ ಸಾರ್ವಜನಿಕ ಮಹತ್ವದ ಸಂಗತಿ. ಸದನ ನಡೆಯುವಾಗ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀವು ಮಾಡಿರತಕ್ಕದ್ದು ಅತ್ಯಂತ ಒಂದು ಗಂಭೀರ ವಿಚಾರ ಇದೆ. ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಮಾಡಲಿಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಮ್ರವಾಗಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್:- (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ, ಬಸ್ಸಿನ ದರ ಹೆಚ್ಚಿಸಿರುವ ಬಗ್ಗೆ ವಿರೋಧಪಕ್ಷದ ನಾಯಕರು ಹಿಂದೆ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದಂತಹ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಮಾಜಿ ಸಚಿವರುಗಳಾದ ಸೋಮಶೇಖರ್‌ರವರು ಬಿ.ಎನ್. ಬಚ್ಚೇಗೌಡರು, ಮಾನ್ಯ ಸೋಮಣ್ಣನವರು ಬಸ್ಸಿನ ದರವನ್ನು ಹೆಚ್ಚಿಸಿರುವ ಬಗ್ಗೆ ಸದನದಲ್ಲಿ ಇವತ್ತು ಪ್ರಸ್ತಾವನೆಯನ್ನು ಮಂಡಿಸಿದ್ದಾರೆ. ದರವನ್ನು ಏರಿಸುವಂತಹ ಸಂದರ್ಭದಲ್ಲಿ ಪತ್ರಿಕೆಗಳಿಗೆ ಹೇಳುವ ಮೂಲಕ ಮಾನ್ಯ ಎಸ್.ಎಂ. ಕೃಷ್ಣಾರವರ ಸರ್ಕಾರ ಈ ದರವನ್ನು ಹೆಚ್ಚಿಸಿರುವುದರಿಂದ ನನಗೆ ಸಂತೋಷವಾಗಿದೆಯೆಂದು ನಾನು ಎಲ್ಲೂ ಹೇಳಿಲ್ಲ. ಪದೇ ಪದೇ ಪತ್ರಿಕೆಗಳ ಮುಖಾಂತರ ಹೇಳುವಂತಹ ಸಂದರ್ಭದಲ್ಲಿ ಸಾರ್ವಜನಿಕರ ಸಹಕಾರವನ್ನು ಪದೇ ಪದೇ ಕೇಳಿದ್ದೇವೆಯೇ ವಿನಹ ಬಡವರ ಜೇಬಿಗೆ

ಕತ್ತರಿ ಹಾಕುವಂತಹ ಕೆಲಸವನ್ನು ನಾನು ಮಾಡಲಿಲ್ಲ. ಕತ್ತರಿ ಹಾಕಿರುವ ಬಗ್ಗೆ ಈಗಾಗಲೇ ಜನರಿಗೆ ಅರಿವು ಆಗಿದೆ. ಏಳು ದಿನಗಳ ಕಾಲ ಅಖಂಡ ರಾಷ್ಟ್ರದಲ್ಲಿ ಡೀಸಲ್ ಬೆಲೆ ಹೆಚ್ಚಾದ ಕಾರಣದಿಂದ ಲಾರಿ ಮುಷ್ಕರ ನಡೆದಿದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮನವನ್ನು ಒಲಿಸುವಂತಹ ಪ್ರಯತ್ನ ಮಾಡಿದಾಗ, ಕೇಂದ್ರ ಸರ್ಕಾರ ಪದೇ ಪದೇ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿರುವಂತಹ ವಿಚಾರ ನನ್ನ ಗಮನಕ್ಕೆ ಬಂದಿರುವಂತೆಯೇ ಮಾನ್ಯ ನಮ್ಮ ವಿರೋಧಪಕ್ಷದ ನಾಯಕರ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಪದೇ ಪದೇ ಕೇಂದ್ರ ಸರ್ಕಾರದವರು ಏನು ಹೇಳಿದರು ಅಂದರೆ ಯಾವುದೇ ಕಾರಣಕ್ಕೂ ನಾವು ಡೀಸಲ್ ಬೆಲೆಯನ್ನು ಇಳಿಸುವುದಕ್ಕೆ ಹೋಗುವುದಿಲ್ಲ. ಆದುದರಿಂದ ನಿಮ್ಮ ನಿಮ್ಮ ರಾಜ್ಯಕ್ಕೆ ಸೀಮಿತವಾದಂತಹ ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ನಾವು ಸೂಚನೆಯನ್ನು ನೀಡುತ್ತಿದ್ದೇವೆಂದು ಹೇಳಿರುವಂತಹ ಕಾಗದಪತ್ರಗಳು ನಮ್ಮ ಸರ್ಕಾರದಲ್ಲಿವೆ. ಹೀಗಿರುವಾಗ ಬಡವರ ಜೇಬಿಗೆ ಕತ್ತರಿ ಹಾಕುವಂತಹ ಕೆಲಸಕ್ಕೆ, ಹಗಲು ದರೋಡೆಯನ್ನು ಯಾರು ಮಾಡುತ್ತಿದ್ದಾರೆನ್ನುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ಸಾರ್ವಜನಿಕರಿಗೆ ಅರಿವು ಇದೆ. ಸ್ವಲ್ಪ ತಡೀರಿ, ಇನ್ನು ಮುಂದೆ ಯಾವ ಯಾವುದಕ್ಕೆ ಕತ್ತರಿ ಹಾಕುತ್ತೀರಿ ಎಂಬುದನ್ನು ನೀವು ಹೇಳುತ್ತೀರಿ ಅದನ್ನು ನಾವು ಕೇಳುತ್ತೇವೆ. ಅನೇಕ ವಿಷಯಗಳನ್ನು ಸದನದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಮೊದಲನೆಯದಾಗಿ ಹಿಂದಿನ ಸಾರಿಗೆ ಸಚಿವರಾದಂತಹ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ಈ ದರ ಏರಿಸುವುದರ ಬಗ್ಗೆ, ಹಿಂದೆ ಇದ್ದಂತಹ ಸರ್ಕಾರದಲ್ಲಿ ಇದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈ ಸಂಸ್ಥೆಗೆ ಆಗುತ್ತಿರುವ ಲುಕ್ಸಾನನ್ನು ತಡೆಹಿಡಿಯುವುದರ ಬಗ್ಗೆ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಇಷ್ಟು ದರವನ್ನು ಹೆಚ್ಚಿಸಬಹುದು ಎನ್ನುವುದರ ಬಗ್ಗೆ ಅವರು ಸಹ ನಿರ್ಣಯ ಮಾಡಿರುವುದರಲ್ಲಿ ಒಬ್ಬರೆಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ಈಗ ಅವರು ಆಡಿರುವ ಮಾತಿನಂತೆ ನಾವು ಹೆಚ್ಚಿಸಿರುವುದನ್ನು ಸಮರ್ಥಿಸಿಕೊಳ್ಳುತ್ತಾರೆ. ಏಕೆಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 22 ದಿವಸ ಆಗಿರುವಂತಹ ಸಂದರ್ಭದಲ್ಲಿ ನಾನು ನಿಜಕ್ಕೂ ಮಾನ್ಯ ಸಿಂಧ್ಯಾರವರನ್ನು ಅಭಿನಂದಿಸುತ್ತೇನೆ. ಮಾನ್ಯ ಬಚ್ಚೇಗೌಡರು ದರವನ್ನು ಬಹಳ ಹೆಚ್ಚಾಗಿ ಏರಿಸಿದ್ದೀರಿ ಎಂದು ಹೇಳಿದ್ದಾರೆ. ಅವರು ಸಹ ಕಡತ ನೋಡಿದ್ದಾರೆ. ಹಿಂದೆ ನಡೆದಂತಹ ಸಚಿವಸಂಪುಟದ ಸಭೆಗಳಲ್ಲಿ ಸಹ ಈ ಕಡತದಲ್ಲಿ ಬಸ್ಸಿನ ದರ ಹೆಚ್ಚಿಸುವ ಬಗ್ಗೆ ಕಡತವನ್ನು ಮಂಡಿಸಿದಾಗ ಅನೇಕ ಜನ ಸಚಿವಸಂಪುಟದಲ್ಲಿ ಇದನ್ನು ತಿರಸ್ಕರಿಸಿರುವಂತಹ ನಡುವಳಿಕೆಗಳು ಆ ಕಡತದಲ್ಲಿದೆ. ಎಷ್ಟೆಷ್ಟು ಏರಿಸಬೇಕೆಂಬುದರ ಬಗ್ಗೆ ಹಿಂದಿನ ಸಚಿವಸಂಪುಟದ ಸಭೆಗಳಲ್ಲಿ ಚರ್ಚೆಗೆ ಬಂದಿರುವಂತಹ ವಿಷಯ ನಾವು ಒಪ್ಪುವಂತಹದ್ದು. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ಹುಬ್ಬಳ್ಳಿಯಲ್ಲಿ ಪತ್ರಿಕಾ ಸಂದರ್ಶನ ಮಾಡಿರುವಂತಹ ಸಂದರ್ಭದಲ್ಲಿ ಒಂದು

ವಿಚಾರವನ್ನು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಅವರು ಏನು ಹೇಳಿದ್ದಾರೆಂದರೆ ಕರ್ನಾಟಕ ರಾಜ್ಯಸರ್ಕಾರವೂ ಬಸ್ಸಿನ ದರ ಏರಿಸಿರುವಂತಹದ್ದು ಬಹಳ ಹೆಚ್ಚಾಗಿದೆ ಆದರೆ ಕೇವಲ ಶೇಕಡ 10ರಷ್ಟು ಹೆಚ್ಚಿಸಬಹುದಾಗಿತ್ತು ಎನ್ನುವ ಅಭಿಪ್ರಾಯವನ್ನು ಪತ್ರಿಕಾ ಸಂದರ್ಶನವನ್ನು ಹುಬ್ಬಳ್ಳಿಯಲ್ಲಿ ಮಾಡಿದಾಗ ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ಒಂದು ಸಂತೋಷದ ಸುದ್ದಿಯನ್ನು ಪ್ರಕಟಿಸುವುದು ಏನೆಂದರೆ, ವಿರೋಧಪಕ್ಷದ ನಾಯಕರು ಸಹ ಇದಕ್ಕೆ ಸಮರ್ಥಿಸುತ್ತಾರೆಂದು ಈ ಸದನದ ಮೂಲಕ ಮತ್ತು ನನ್ನ ಇಲಾಖೆಯ ಮೂಲಕ ನಾನು ಅವರಿಗೆ ಹೇಳುತ್ತಿದ್ದೇನೆ. ದರ ಹೆಚ್ಚಾಗಿದೆ ಎನ್ನುವ ಬಗ್ಗೆ ತಾವು ವಾದ ಮಾಡುವುದರ ಬಗ್ಗೆ ಅನೇಕ ದಾಖಲಾತಿಗಳನ್ನು ನಾವು ಇಟ್ಟುಕೊಂಡಿರುವಂತಹ ಸಂದರ್ಭದಲ್ಲಿ ಈ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ತಾವು ಅನೇಕ ವಿಚಾರಗಳನ್ನು ಹೇಳಿದ್ದೀರಿ. ಟ್ಯಾರಿಫ್ ಸಮಿತಿಯನ್ನು ರಚನೆ ಮಾಡಬೇಕೆನ್ನುವ ಸಲಹೆಯನ್ನು ಮಾನ್ಯ ಸಿಂಧ್ಯಾರವರು ಕೊಟ್ಟಿದ್ದಾರೆ. ನಿಜಕ್ಕೂ ಈ ಟ್ಯಾರಿಫ್ ಸಮಿತಿ ಹಿಂದೆ ಇತ್ತು. ಆದರೆ ಶಾಶ್ವತವಾಗಿ ಟ್ಯಾರಿಫ್ ಕಮಿಟಿಯನ್ನು ರಚನೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸಿ ಟ್ಯಾರಿಫ್ ಕಮಿಟಿಯನ್ನು ರಚನೆ ಮಾಡುವ ಬಗ್ಗೆ ವಿಚಾರ ಮಾಡಿ ರಚಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನೇಕ ಸದಸ್ಯರು ಏನು ಹೇಳುತ್ತಿದ್ದಾರೆ, ಅದರಲ್ಲೂ ಮಾನ್ಯ ಸಿಂಧ್ಯಾರವರು ಕೊಟ್ಟಿರತಕ್ಕ ಉತ್ತಮವಾದ ಸಲಹೆ ಅಂದರೆ ಕ್ಯಾನ್ಸಲೇಷನ್ ಅನ್ನು ತಾವು ಕಡಿಮೆ ಪ್ರಮಾಣಕ್ಕೆ ತರಬೇಕೆಂದು ತಾವು ಹೇಳಿದ್ದೀರಿ. ನಿಜಕ್ಕೂ ಸಹ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ತಕ್ಷಣವೇ ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಜೊತೆಗೆ ಅಬ್ಸೆಂಟಿಸಮ್ ಏನಿದೆ ಕರ್ತವ್ಯಕ್ಕೆ ಹಾಜರಾಗಬೇಕಾದ ನಮ್ಮ ಕಾರ್ಮಿಕರ ಸಂಖ್ಯೆ ಏನು ಕಡಿಮೆಯಾಗುತ್ತಿದೆ ತಕ್ಷಣವೇ ಅದರ ಬಗ್ಗೆ ನಾವು ಗಮನ ಕೊಡುತ್ತೇವೆ. ಇನ್ನು ರಿಯಲೈಸೇಷನ್ ಹೆಚ್ಚು ಮಾಡಿಯೆಂದು ಹೇಳಿದ್ದೀರಿ, ಅದರ ಬಗ್ಗೆ ಕೂಡ ನಾವು ಪ್ರಯತ್ನ ಮಾಡುತ್ತೇವೆ. ಇವತ್ತು ನಮಗೆ ಹೊರೆಯಾಗಿರುವ ಬಗ್ಗೆ ಮಾತನಾಡಿದ್ದು ಏನಿದೆ ಅದನ್ನು ನಾನು ಒಪ್ಪುವುದಿಲ್ಲ. ಕಾರಣವೇನೆಂದರೆ, ತಮಗೆಲ್ಲರಿಗೂ ಗೊತ್ತಿರುವಹಾಗೆ ಡೀಸಲ್ ಬೆಲೆಯನ್ನು ಲೀಟರ್‌ಗೆ 4 ರೂಪಾಯಿ 6 ಪೈಸೆ ಹೆಚ್ಚಿಸಿದೆ. ನನ್ನ ಸಂಸ್ಥೆಯು ಉತ್ತಮ ರೀತಿಯಲ್ಲಿ ನಡೆಯುವುದರ ಜೊತೆಗೆ, ನಮಗೆ ಆದಾಯದ ಪ್ರಶ್ನೆ ಸರ್ಕಾರಕ್ಕೆ ಇಲ್ಲ. ಮಾನ್ಯ ಸಿಂಧ್ಯಾರವರು ಮಾತನಾಡುವಂತಹ ಸಂದರ್ಭದಲ್ಲಿಯೂ ನಮ್ಮ ವಿರೋಧಪಕ್ಷದಲ್ಲಿದ್ದಾಗಲೂ ಅನೇಕ ವಿಚಾರಗಳಲ್ಲಿ ಮಾತನಾಡಿದ್ದೇವೆ. ನಾವು ಯಾವುದೇ ಸಂದರ್ಭದಲ್ಲಿಯೂ ಸಹ ಹಿಂದಿನ ಸರ್ಕಾರ ಇರಬಹುದು, ಇವತ್ತಿನ ಸರ್ಕಾರ ಇರಬಹುದು. ಆ ಸಂಸ್ಥೆಯಿಂದ ಆದಾಯ ಬರಬೇಕೆನ್ನುವ ವಿಚಾರದಿಂದ ನಡೆಸುತ್ತಿಲ್ಲ. ಅದರಲ್ಲಿ ಲುಕ್ಸಾನು ಆಗಿದೆ. ಆದಾಯದಿಂದ ನಮ್ಮ ಸಂಸ್ಥೆಯು ಉತ್ತಮ ರೀತಿಯಿಂದ ನಡೆದು ಸಾರ್ವಜನಿಕರಿಗೆ, ರೈತರಿಗೆ, ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತಹದ್ದೇ ನಮ್ಮ

ಉದ್ದೇಶವೆಂದು ಹೇಳಿ ಎಲ್ಲಾ ವಿರೋಧಪಕ್ಷದ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ನಮಗೆ ಇದರಿಂದ ಆದಾಯ ಬರುವಂತದ್ದು ಅಲ್ಲ. ಲೀಟರ್‌ಗೆ 4 ರೂಪಾಯಿ 6 ಪೈಸೆಗೆ ಡೀಸಲ್ ಬೆಲೆಯನ್ನು ಏರಿಸಿರುವುದರಿಂದ, ನಾವೇನು ಬಸ್‌ಗಳಿಗೆ ಡೀಸಲ್ ಅನ್ನು ಉಪಯೋಗಿಸುತ್ತೇವೆ, ಈ ರೀತಿ ಉಪಯೋಗಿಸುವ ಡೀಸಲ್ ಬೆಲೆ ಹೆಚ್ಚಾಗಿರುವುದರಿಂದ ಸಂಸ್ಥೆಯ ಮೇಲೆ ಹೊರೆ ಬೀಳುವಂತಹದ್ದು ನೂರು ಕೋಟಿ 10 ಲಕ್ಷ ರೂಪಾಯಿಗಳೆಂದು ನೇರವಾಗಿ ಹೇಳಬೇಕಾಗುತ್ತದೆ. ನಾವು ಬಸ್ಸಿನ ದರವನ್ನು ಹೆಚ್ಚಿಸಿರುವ ಬಗ್ಗೆ ಅನೇಕ ಸದಸ್ಯರು ಹೇಳುತ್ತಿದ್ದರು, ನಮಗೆ ಆದಾಯ ಬರುವುದಲ್ಲ, ನಾವೇನು ಬಸ್ಸಿಗೆ ಡೀಸಲ್ ಅನ್ನು ಉಪಯೋಗಿಸುತ್ತಿದ್ದೇವೆ ಆ ಡೀಸಲ್‌ನ ಖರ್ಚನ್ನು ಭರಿಸುವುದಕ್ಕಾಗಿ ವೆಚ್ಚವಾಗುತ್ತಿರುವ ಹಣ 110 ಕೋಟಿಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಮಾನ್ಯ ಸಿಂಧ್ಯಾರವರು, ಬಚ್ಚೇಗೌಡರು, ರಂಗನಾಥ್‌ರವರು, ಅಜೀಜ್‌ಸೇಠ್‌ರವರು ಈ ಇಲಾಖೆಯನ್ನು ವಹಿಸಿಕೊಂಡು ಕೆಲಸ ಮಾಡಿ ಹೆಚ್ಚು ಮಾಹಿತಿಯನ್ನು ಹೊಂದಿರುವುದರಿಂದ ಬಸ್ಸಿನ ದರ ಏರಿಸಿರುವುದರಿಂದ ಸಂಸ್ಥೆಗೆ ಲಾಭವಾಗುತ್ತದೆನ್ನುವ ವಿಚಾರ ಅಲ್ಲ; ಸಂಸ್ಥೆ ಲುಕ್ಸಾನ್‌ನಲ್ಲಿ ನಡೆಯಕೂಡದೆಂದು ನಾವು ತುರ್ತಾಗಿ ತೀರ್ಮಾನ ತೆಗೆದುಕೊಳ್ಳಬೇಕಾಯಿತು. ಮಾನ್ಯ ಸಿಂಧ್ಯಾರವರಿಗೂ, ಬಚ್ಚೇಗೌಡರಿಗೂ, ವಿರೋಧಪಕ್ಷದ ನಾಯಕರಿಗೂ ಈ ವಿಚಾರ ತಿಳಿದಿದೆ. ದಿನನಿತ್ಯ 70ರಿಂದ 80 ಲಕ್ಷ ರೂಪಾಯಿಗಳ ಲುಕ್ಸಾನಿನಿಂದ ನಮ್ಮ ಸಂಸ್ಥೆ ನಡೆಯುತ್ತಿದೆ. ತಕ್ಷಣವೇ ನಾನು ಈ ಬೆಲೆಯನ್ನು ಏರಿಸದೇ ಹೋಗಿದ್ದರೆ, ಪ್ರಾಯಶಃ ಒಂದು ವಾರಕ್ಕೆ ಒಂದು ಕೋಟಿ ರೂಪಾಯಿಗಳ ಲುಕ್ಸಾನ್‌ನಲ್ಲಿ ಈ ಸಂಸ್ಥೆ ಹೋಗಬೇಕಾಗಿತ್ತು. ನಾವು ಏರಿಸಿರುವ ಬಗ್ಗೆ ತಾವು ಹೇಳಬಹುದು. ಮಾನ್ಯ ಬಚ್ಚೇಗೌಡರು ಹೇಳಿದರು. ರೈತರಿಗೆ, ಕಾರ್ಮಿಕರಿಗೆ ಮತ್ತು ಇನ್ನೂ ಅನೇಕರಿಗೆ ಇದು ಹೊರೆಯಾಗಿದೆ ಎಂದು. ತಾವು ನೋಡಬಹುದು. ಡೀಲೆಕ್ಸ್ ಬಸ್ ಆಗಲೀ, ಹೈಟೆಕ್ಸ್ ಬಸ್ ಆಗಲೀ, ಏರ್ ಬಸ್ ಆಗಲೀ ಇವುಗಳಿಗೆ ನಾವು ಕಿಲೋಮೀಟರ್ ಮೇಲೆ ಕೇವಲ 6 ಪೈಸೆಯನ್ನು ಹೆಚ್ಚಿಸಿದ್ದೇವೆ. ಆದರೆ, ಕೆಂಪು ಬಸ್ಸು, ಅದರಲ್ಲಿಯೂ ರೈತರು ಓಡಾಡುವಂತಾದ್ದು, ಬಡವರು ಓಡಾಡುವಂತಹ, ಕಾರ್ಮಿಕರು ಓಡಾಡುವಂತಹ ಬಸ್ಸುಗಳ ಮೇಲೆ ಕೇವಲ 3 ಪರ್ಸೆಂಟ್ ಮಾತ್ರ ನಾವು ಏರಿಸಿದ್ದೇವೆ. ಇದೇನು ನಾವು ಮಾಡಿದ ಲೆಕ್ಕಾಚಾರವೂ ಅಲ್ಲ. ಪ್ರಾಯಶಃ ಇದು ನಾವು ಮತ್ತು ಅವರು ಸೇರಿ ಮಾಡಿರುವಂಥ ಲೆಕ್ಕಾಚಾರ ಎಂದು ನಾನು ಹೇಳಬೇಕಾಗುತ್ತದೆ. ನಮ್ಮ ಸಾರಿಗೆ ಸಂಸ್ಥೆಯು ಸಿದ್ಧಪಡಿಸಿದ ಕಡತದ ಮೇಲೆ, ನಾನು, ನಮ್ಮ ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಸದಸ್ಯರುಗಳು ಎಲ್ಲರೂ ಚರ್ಚೆ ನಡೆಸಿದ ನಂತರ ಯಾವ ಯಾವ ಜನರ ಮೇಲೆ ಹೊರೆಯಾಗುತ್ತದೆ, ಮತ್ತು ಹೊರೆಯಾಗಬಾರದು ಎಂಬ ದೃಷ್ಟಿಯಿಂದ ಚರ್ಚೆ ನಡೆಸಿ, ಬಡವರ ಮೇಲೆ ಹೊರೆಯಾಗದಂತೆ ಶೇಕಡ 3 ರಷ್ಟು ನಾವು ಹೆಚ್ಚಿಸಿರುವಂತಹ ಇದು ಬಡವರು ಮತ್ತು ಮಧ್ಯಮ ವರ್ಗದವರಿಗೆ ವ್ಯತ್ಯಾಸವಾಗುವಂತಾದ್ದು ಎಂದು ಹೇಳಿ,

ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾಮೂಲಿಬಸ್ ಆದರಲ್ಲಿಯೂ ಕೆಂಪು ಬಸ್ಸಿಗೆ ನಾವು ಕೇವಲ 3 ಪರ್ಸೆಂಟ್ ಏರಿಸಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಸೌಕರ್ಯವಿರುವ ಬಸ್ಸುಗಳಿಗೆ 4 ಪೈಸೆ ಏರಿಸಿದ್ದೇವೆ, ಸೂಪರ್ ಡೀಲಕ್ಸ್ ಅಥವಾ ಏರ್‌ಬಸ್ ಎಂದು ಏನು ಹೇಳುತ್ತೇವೆ ಇವುಗಳಿಗೆ 5 ಪೈಸೆ ಏರಿಸಿದ್ದೇವೆ. ಇದರ ಜೊತೆಗೆ ಎರಡು ವರ್ಷಗಳಿಂದ ನಮ್ಮ ಕಾರ್ಮಿಕರಿಗೆ ಕೊಡಬೇಕಾದ ಭತ್ಯೆಯನ್ನು ಕೊಟ್ಟಿದ್ದೇವೆ. ನಾವು ಬಡವರ ಬಗ್ಗೆ, ಕಾರ್ಮಿಕರ ಬಗ್ಗೆ ಮಾತನಾಡುತ್ತೇವೆ. ರೈತರ ಬಗ್ಗೆ ನಾವು ಮಾತನಾಡುತ್ತೇವೆ. ಸಾರಿಗೆ ಇಲಾಖೆಯಲ್ಲಿ ಸುಮಾರು 70 ಸಾವಿರ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುವಂಥ ಈ ಸಂದರ್ಭದಲ್ಲಿ ಅವರಿಗೆ ಕೊಡಬೇಕಾದಂಥ ಅನೇಕ ಭತ್ಯೆಗಳನ್ನು ಕೊಡುವಂಥಾದ್ದು, ಎರಡು ವರ್ಷಗಳಿಂದ ಬಾಕಿ ಇದ್ದಿದ್ದು ಮಾನ್ಯ ಸಿಂಧ್ಯ ಅವರಿಗೆ ಮತ್ತು ಮಾನ್ಯ ಬಚ್ಚೇಗೌಡರಿಗೂ ಗೊತ್ತಿರುವಂಥ ವಿಚಾರ. ತಮಗೆ ಈ ಮಾಹಿತಿ ಬೇಕಾದಲ್ಲಿ, ನಾನು ಆ ಮಾಹಿತಿಯನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅದರಲ್ಲಿ ಹೆಚ್ಚು ಕಡಿಮೆ 12 ಕೋಟಿ ರೂಪಾಯಿಗಳಷ್ಟು ಕಾರ್ಮಿಕರಿಗೆ ಭತ್ಯೆಯನ್ನು ಕೊಡುವ ಬಗ್ಗೆ ನಾವು ಆಸಕ್ತಿ ವಹಿಸಿದ್ದೇವೆ. ಈ ಏರಿಸಿರುವ ದರದಿಂದ ಕಾರ್ಮಿಕರಿಗೂ ಸಹ ಅನ್ಯಾಯವಾಗದ ರೀತಿಯಲ್ಲಿ ನ್ಯಾಯ ಒದಗಿಸಿಕೊಡಬೇಕೆಂಬುದು ಸರ್ಕಾರದ ಅಭಿಲಾಷೆ. ಆ ದೃಷ್ಟಿಯಿಂದ ತಮ್ಮೆಲ್ಲರಲ್ಲಿಯೂ ನಾನು ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಏರಿಸಿರುವ ಬಗ್ಗೆ ವಿರೋಧ ವ್ಯಕ್ತಪಡಿಸುತ್ತೀರಿ ಎನ್ನುವ ವಿಚಾರವಲ್ಲ. ಅನೇಕ ಸದಸ್ಯರು ಮತ್ತು ವಿರೋಧಪಕ್ಷದ ನಾಯಕರೂ ಸೇರಿದಂತೆ ಒಂದೇ ಒಂದು ಮಾತು ಹೇಳಿದ್ದೀರಿ. ಇದನ್ನು ವಾಪಸ್ ಪಡೆಯಿರಿ ಎಂದು ಹೇಳಿದಿರಿ. ವಿರೋಧ ಪಕ್ಷದ ನಾಯಕರಿಗೆ ನಾನು ಒಂದು ವಿಚಾರ ಹೇಳುತ್ತೇನೆ. ತಾವು ಆ ಭಾಗದಲ್ಲಿರಬಹುದು, ಕೇಂದ್ರದಲ್ಲಿ ನಿಮ್ಮ ಪಕ್ಷದ ಸರ್ಕಾರ ಇರಬಹುದು. ಇಲ್ಲಿ ನಾವು ಇವತ್ತು ಆಡಳಿತ ಪಕ್ಷದಲ್ಲಿರಬಹುದು. ತಾವು ಡೀಸೆಲ್ ಬೆಲೆಯನ್ನು ಇಳಿಸಿದರೆ, ನಾವು ಇವತ್ತು ಏನು ಹೆಚ್ಚಿಸಿದ್ದೇವೆ, ಅದನ್ನು ಇಳಿಸುವುದಕ್ಕೆ ಸಿದ್ಧವಾಗಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ, ಇದು ಕೇವಲ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ರಾಜ್ಯದಲ್ಲಿ ಡೀಸೆಲ್ ಬೆಲೆ ಏರಿಸುವುದು ನಮ್ಮ ಜವಾಬ್ದಾರಿ ಅಲ್ಲ. ಕೇಂದ್ರ ಸರ್ಕಾರದಲ್ಲಿ ಡೀಸೆಲ್ ಬೆಲೆ ಏರಿಸಿರುವ ಬಗ್ಗೆ, ಇಡೀ ದೇಶದ ಜನರಲ್ಲಿ ತಿಳುವಳಿಕೆ ಇರುವಂಥಾದ್ದು. ಲಾರಿ ಮುಷ್ಕರ ನಡೆದಿರುವಂಥ ಸಂದರ್ಭದಲ್ಲಿಯೂ ಸಹ, ಅವರು ಎಷ್ಟು ಹೆಚ್ಚಿಸಿಕೊಳ್ಳಬೇಕೆಂಬ ಬಗ್ಗೆಯೂ ಕೂಡ, ಲಾರಿ ಮಾಲೀಕರು ಅವರಿಗೆ ಬರಬೇಕಾದ ಬಾಡಿಗೆ, ವಗೈರೆಗಳನ್ನು ಹೆಚ್ಚಿಸಿಕೊಂಡಿರುವ ವಿಚಾರ ತಮಗೂ ತಿಳಿದಿರುವಂತಾದ್ದು. ರಾಷ್ಟ್ರಮಟ್ಟದಲ್ಲಿ ಅನೇಕ ಸಂಘಸಂಸ್ಥೆಗಳು ಇದಕ್ಕೆ ಪ್ರತಿಭಟನೆ ವ್ಯಕ್ತ ಮಾಡಿರುವಂಥ ಸಂದರ್ಭದಲ್ಲಿಯೂ ಸಹ ಕೇಂದ್ರ ಸರ್ಕಾರ ಇದರ ಬಗ್ಗೆ ಯಾವುದೇ ತೀರ್ಮಾನ ಮಾಡದೇ ಇರುವಂತಾದ್ದು ತಮ್ಮ ಗಮನಕ್ಕೂ ಮತ್ತು ನಮ್ಮ ಗಮನಕ್ಕೂ ಬಂದಿರುವಂಥ ವಿಚಾರ. ಇದರ ಮಧ್ಯದಲ್ಲಿ ನಮ್ಮ ಖಾಸಗಿ

ಬಸ್ಸಿನ ಬಗ್ಗೆ ಮಾನ್ಯ ಆಗರ ಜ್ಞಾನೇಂದ್ರರವರು ಹೇಳಿದ್ದಾರೆ. ಈಗ ಮಾನ್ಯ ಸಿಂಧ್ಯರವರು ಹೇಳಿದ್ದಾರೆ. ಜಿಲ್ಲಾಮಟ್ಟದಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಏನಿವೆ, ಜಿಲ್ಲಾಧಿಕಾರಿಗಳು ಆದರ ಅಧ್ಯಕ್ಷರಾಗಿ ಖಾಸಗಿ ಬಸ್ ಮಾಲೀಕರು ಎಷ್ಟು ಪ್ರಯಾಣ ದರವನ್ನು ಹೆಚ್ಚಿಸಬೇಕೆಂಬ ಬಗ್ಗೆ, ನಾವು ಈ ದರವನ್ನು ಏರಿಸುವ ಮುನ್ನವೇ ಅಂದರೆ ಒಂದು ತಿಂಗಳು ಮುಂಚಿತವಾಗಿಯೇ ಖಾಸಗಿ ಬಸ್ಸಿನ ಮಾಲೀಕರು ದರವನ್ನು ಏರಿಸಿದ್ದಾರೆ. ಈ ದರವನ್ನು ಏರಿಸುವಾಗ ಜಿಲ್ಲಾಧಿಕಾರಿಗಳ ಸಂಪರ್ಕ ಮಾಡಿ, ಆಯಾ ಜಿಲ್ಲೆಗಳಿಗೆ ಸಂಬಂಧಿಸಿದ ಬಸ್ ಮಾಲೀಕರುಗಳ ಸಭೆಯನ್ನು ಕರೆದು, ಶೇಕಡ 25 ರಿಂದ 30 ರಷ್ಟು ಏರಿಸಿದ್ದಾರೆಂಬ ವಿಚಾರ ನಮ್ಮ ಗಮನಕ್ಕೂ ಬಂದಿದೆ. ಆದರ ಜೊತೆಗೆ, ಎಲ್ಲಿ ತೊಂದರೆಯಾಗಿದೆ, ಅಂತಹ ಕಡೆ ನಾವು ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿ ದರವನ್ನು ಏರಿಕೆ ಮಾಡಿದ್ದರೆ, ದಯಮಾಡಿ ತಾವು ನನಗೆ ಬರೆಯಿರಿ. ತಕ್ಷಣವೇ ನಾನು ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಉಪ ಸಾರಿಗೆ ಇಲಾಖೆಯ ಅಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವಂತೆ ಆದೇಶ ನೀಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಾವು ಏರಿಸಿರುವಂತಾದ್ದು ಮತ್ತು ತಮ್ಮೆಲ್ಲರ ಗಮನಕ್ಕೆ ತರುವ ವಿಚಾರವೆಂದರೆ, ದಿನನಿತ್ಯ ಸಾರಿಗೆ ವ್ಯವಸ್ಥೆಯಲ್ಲಿ ಏರಿಕೆ ಮಾಡಿರುವುದನ್ನು ನಾನಾಗಲೇ ಹೇಳಿದ್ದೇನೆ. ಆದರೆ ಬೆಂಗಳೂರು ಸಾರಿಗೆ ವ್ಯವಸ್ಥೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವ ಬಗ್ಗೆ ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣ ಇನ್ನೊಬ್ಬರ ಮೇಲೆ ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೆ, ಸಾರ್ವಜನಿಕರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ, ಪ್ರಯಾಣಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲವು ಸೌಕರ್ಯಗಳನ್ನು ಸಾರಿಗೆ ವತಿಯಿಂದ ನಾವು ಹಮ್ಮಿಕೊಳ್ಳಬೇಕಾಗಿತ್ತು. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಇವತ್ತು ಚಿಲ್ಲರೆ ಅಭಾವ ಇದೆ. ನಮ್ಮ ಇಲಾಖೆಯ; ಈ ವಿಚಾರ ಮಾನ್ಯ ಸಿಂಧ್ಯರವರ ಗಮನಕ್ಕೆ ಮತ್ತು ಮಾನ್ಯ ಬಚ್ಚೇಗೌಡರ ಗಮನಕ್ಕೂ ಬಂದಿರುತ್ತದೆ. ನಮ್ಮಲ್ಲಿ 25 ಪೈಸೆಯ ಮತ್ತು 50 ಪೈಸೆಯ ಕಾಯಿನ್ ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯತೆ ಇಲ್ಲದೇ ಇರುವುದರಿಂದ, ನಿರ್ವಾಹಕರ ಕರ್ತವ್ಯದಲ್ಲಿ ಕೆಲವು ಭ್ರಷ್ಟಾಚಾರಗಳು ನಡೆಯುತ್ತವೆ, ನಾವು ಎರಡು ರೂಪಾಯಿ ಕೊಟ್ಟಾಗ 25 ಪೈಸೆ ವಾಪಸ್ ಕೊಡುವ ಬಗ್ಗೆ ನ್ಯೂನತೆ ಇರುವುದರಿಂದ ನಿರ್ವಾಹಕರು ಈ ಚಿಲ್ಲರೆಯನ್ನು ಪ್ರಮಾಣಿಕರಿಗೆ ಕೊಡುತ್ತಿರಲಿಲ್ಲ. ಈ ಚಿಲ್ಲರೆಯನ್ನು ನಿರ್ವಾಹಕರೇ ಜೇಬಿಗೆ ಹಾಕಿಕೊಳ್ಳುತ್ತಿದ್ದರು ಎಂಬ ದೂರಿನ ಮೇಲೆ, ಪ್ರಯಾಣಿಕರು ದೂರು ಸಲ್ಲಿಸಿದ ನಂತರ, ನಾವು ದೀರ್ಘವಾಗಿ ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಸದಸ್ಯರ ಜೊತೆಯಲ್ಲಿ ಚರ್ಚೆ ನಡೆಸಿದ ನಂತರವೇ ಇದನ್ನು ರೌಂಡ್ ಆಫ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. 1-25 ಇರುವಂತಾದ್ದನ್ನು ಒದೂವರೆ ರೂಪಾಯಿ ಮತ್ತು ಒಂದೂಮುಕ್ಕಾಲು ಇರುವುದನ್ನು ಎರಡು ರೂಪಾಯಿ ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಬೆಂಗಳೂರು ಮಹಾನಗರ

ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುವಂತಹ ಸಾರಿಗೆ ವ್ಯವಸ್ಥೆಯಲ್ಲಿ ಶೇಕಡ 19 ಹೆಚ್ಚಿಸಿದ್ದೇವೆಂದು ಏನು ಹೇಳುತ್ತಿದ್ದೇವೆ, ಮಾನ್ಯ ಬಚ್ಚೇಗೌಡರು ಹೇಳಿದಹಾಗೆ ಶೇಕಡ 2 ರಷ್ಟು, ಎರಡು ಪೈಸೆಯಷ್ಟು ಹೆಚ್ಚಾಗಿ ಆದಾಯ ಸಾರಿಗೆ ಇಲಾಖೆಗೆ ಬರುತ್ತಾ ಇದೆಯೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇದು ಅನಿವಾರ್ಯ. ಇವತ್ತು ಸಾರಿಗೆ ಇಲಾಖೆ ಯಾವ ಯಾವ ವಿಚಾರದಲ್ಲಿ ಲುಕ್ಸಾನ್ ನಡೆಯುತ್ತದೆ ಎಂಬುದರ ಬಗ್ಗೆ ಮುಂದಿನ ದಿನಗಳಲ್ಲಿ ಸಂಪೂರ್ಣವಾದ ಮಾಹಿತಿಯನ್ನು ಈ ಸದನದಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನೇಕ ಹಿರಿಯ ಸದಸ್ಯರು ಈ ಇಲಾಖೆಯ ಸುಧಾರಣೆ ಬಗ್ಗೆ ನನಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಅವರುಗಳ ಸಹಕಾರವನ್ನೂ ನಾನು ಬಯಸುತ್ತೇನೆ ಮತ್ತು ಅವರು ನೀಡಿರುವಂತಹ ಸಲಹೆಗಳನ್ನು ಸ್ವೀಕರಿಸಿ, ಮಾನ್ಯತೆಯನ್ನು ಕೊಟ್ಟು ಈ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ನಾನು ತರುತ್ತೇನೆ. ಮುಂದಿನ ದಿನಗಳಲ್ಲಿ ಲುಕ್ಸಾನ್ ಆಗುವಂತಾದ್ದರ ಬಗ್ಗೆ ಮತ್ತು ಇದನ್ನು ತಡೆಯುವಂತಹ ಪ್ರಯತ್ನವನ್ನು ಮಾನ್ಯ ಎಸ್.ಎಂ. ಕೃಷ್ಣಾರವರ ಸರ್ಕಾರ ಮತ್ತು ನಾನು ಸಾರಿಗೆ ಮಂತ್ರಿಯಾಗಿ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ತಮ್ಮ ಮೂಲಕವಾಗಿ ವಿರೋಧ ಪಕ್ಷದ ನಾಯಕರಿಗೂ ಮತ್ತು ಗೌರವಾನ್ವಿತ ಎಲ್ಲಾ ವಿರೋಧಪಕ್ಷಗಳ ಸದಸ್ಯರುಗಳ ಗಮನಕ್ಕೆ ಈ ವಿಷಯಗಳನ್ನು ತಂದು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):-ಸನ್ಮಾನ್ಯ ಅಧ್ಯಕ್ಷರೇ, ಒಂದು ಸ್ಪಷ್ಟೀಕರಣವನ್ನು ಕೇಳುತ್ತಾ ಇದ್ದೇನೆ. ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರದವರು ಹೆಚ್ಚಿಸಿದರು ಎಂದು ಹೇಳಿದರು. ಅದರ ಪ್ರಕಾರ, ಪ್ರಪೋರ್ಷನೇಟ್ ಆಗಿ ಇವರು ಹೆಚ್ಚಿಸಿದ್ದಾರೆಯೇ ಹೇಗೆ? ಇವತ್ತು ಸನ್ಮಾನ್ಯ ಸಾರಿಗೆ ಸಚಿವರು ಸ್ಪಷ್ಟವಾದ ಉತ್ತರವನ್ನು ಕೊಟ್ಟಿಲ್ಲ. ಇವತ್ತು ಡೀಸೆಲ್ ಬೆಲೆಯನ್ನು ಏರಿಸಿರುವುದರಿಂದ ಯಾವರೀತಿ ತೊಂದರೆಯಾಗಿದೆ ಎಂಬುದನ್ನು ಸರಿಯಾಗಿ ಹೇಳಲಿಲ್ಲ. ಇವತ್ತು 110 ಕೋಟಿ ರೂಪಾಯಿ ಬರ್ಡನ್ ಬೀಳುತ್ತದೆ ಎಂದು ಹೇಳಿದರು. ಆದರೆ ಇವರು ಏರಿಸಿರುವುದು ನೋಡಿದರೆ 250 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಇವತ್ತು ನಿಜವಾಗಿಯೂ ಡೀಸೆಲ್ ಬೆಲೆ ಎಂದು ಹೇಳಿ ಕೇಂದ್ರ ಸರ್ಕಾರದ ಮೇಲೆ ಹೊಣೆಗಾರಿಕೆಯನ್ನು ಹಾಕಿ, ಇವರು ಆದಾಯವನ್ನು ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಸರ್ಕಾರ ಏನು ಈ ರೀತಿ ಸಾರಿಗೆ ದರಗಳನ್ನು ಏರಿಸಿ, ಪ್ರಯಾಣಿಕರ ಮೇಲೆ ಯಾವ ರೀತಿ ಭಾರವನ್ನು ಹಾಕಿದ್ದಾರೆ, ಜನಸಾಮಾನ್ಯರಿಗೆ ಇವತ್ತು ಏನು ಅನ್ಯಾಯ ಮಾಡಿದ್ದಾರೆ, ಇದನ್ನು ನಾನು ಪ್ರತಿಭಟನೆ ಮಾಡುತ್ತಾ ಇದ್ದೇನೆ ಮತ್ತು ಸಭಾತ್ಯಾಗವನ್ನೂ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಸೇರಿದಂತೆ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು.)

ಶ್ರೀ ಬಿ.ಬಿ. ಶಿವಪ್ಪ:-ಸನ್ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕೆ.ಎಸ್.ಆರ್.ಟಿ.ಸಿ ಎಂದರೆ, ಕಚಡಾ ಸರ್ವೀಸ್ ರನ್ ಬೈ ತರಲೆ ಅಂಡ್ ಕಂಪನಿ ಎಂದು ಹೇಳುತ್ತಾರೆ. ಇದನ್ನು ಬದಲಾಯಿಸಿಕೊಳ್ಳಿ ಎಂದು ನಾನು ಸಾರಿಗೆ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ:-ಮಾನ್ಯ ಗೌರವಾನ್ವಿತ ಸಾರಿಗೆ ಮಂತ್ರಿಗಳು ಪರ್ಮನೆಂಟ್ ಟ್ಯಾರಿಫ್ ಕಮಿಟಿ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ಅದನ್ನು ಮಾಡಿ. ಏಕೆಂದರೆ, ನಾವು ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮೊನ್ನೆ ನಾವು ಬಿ ಎಂ ಟಿ ಸಿ ನಲ್ಲಿ ಕಮ್ಯೂಟರ್ಸ್ ಮೀಟಿಂಗ್‌ಗಳನ್ನು ಮಾಡಿದಾಗ ರೌಂಡ್.ಆಫ್ ಮಾಡಿ ಎಂದು ಅವರೇ ಹೇಳಿದರು. ಅದನ್ನು ನೀವು ಮಾಡಿದ್ದೀರಿ, ಅದಕ್ಕಾಗಿ ನಮ್ಮ ಕಾಂಪ್ಲಿಮೆಂಟ್ ಕೊಡುತ್ತೇವೆ. ಮತ್ತೆ ಇನ್ನೊಂದು ಈ ಕ್ಯಾನ್ಸಲೇಷನ್ ವಿಚಾರ. ಇದು ಈ ಕೂಡಲೇ ಆಗಬೇಕು. ಹಳ್ಳಿಗಳಲ್ಲಿ ಈಗಾಗಲೇ ಇದರ ಬಗ್ಗೆ ಕೂಗು ಎದ್ದುಬಿಟ್ಟಿದೆ. 7,8 ಪರ್ಸೆಂಟಿನಿಂದ 22 ಪರ್ಸೆಂಟಿಗೆ ಹೋಗಿಬಿಟ್ಟಿದೆ. ನೀವು ಇದರ ಬಗ್ಗೆ ಯೀಲ್ಡ್ ಆಗಬಾರದು. ತಾವು ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದ್ದೀರಿ. ಇದನ್ನು ಈ ಕೂಡಲೇ ಮಾಡಬೇಕು. ಇನ್ನು ಟ್ರಾನ್ಸ್‌ಪೋರ್ಟ್ ಪಾಲಿಸಿಯ ಬಗ್ಗೆ ನಾವು ಹೇಳಿದ್ದೇವೆಂದು ಹೇಳುತ್ತೀರಿ. ಎಲ್ಲಾ ಮಂತ್ರಿಗಳೂ ಒಂದೊಂದು ಹೊಸ ನೀತಿಯನ್ನು ಮಾಡಿಕೊಂಡು ಹೋಗುತ್ತೇವೆಂದು ಹೊಸದಾಗಿ ಮಂತ್ರಿಗಳಾದಾಗ ಹೇಳುತ್ತಾರೆ. ಏಕೆಂದರೆ, ರಾಜ್ಯದಲ್ಲಿ ಇದು ಅತ್ಯಂತ ಕೋರ್ ಸೆಕ್ಟಾರ್.ಕೆ ಇ ಬಿ ಅಂಡ್ ಕೆ ಎಸ್ ಆರ್ ಟಿ ಸಿ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂಬುದು ಗೊತ್ತಾಗಬೇಕು-ಎಂಬ ಬಗ್ಗೆ ನಾನು ಒತ್ತಾಯ ಮಾಡಿ, ತಾವು ಇಷ್ಟೆಲ್ಲಾ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರು ಇಲ್ಲಿ ಕುಳಿತಾಗ ಏನೇನು ಮಾಡಿದರೋ ಅದನ್ನೆಲ್ಲಾ ನಾವು ಮಾಡುವುದಕ್ಕಾಗಿ ಹೋಗುವುದಿಲ್ಲ. ದಯವಿಟ್ಟು ಈ ಸಾಮಾನ್ಯ ಬಸ್ ಸೇವೆ ಏನಿದೆ, ಇದರ ಬಗ್ಗೆ ತಾವೇನು 6 ಪೈಸೆ ಜಾಸ್ತಿ ಮಾಡಿದ್ದೀರಿ, ಅದು ಬಡವರಿಗೆ ಹಳ್ಳಿಗಳಿಂದ ತಾಲ್ಲೂಕು ಸ್ಥಳಗಳಿಗೆ ಹೋಗತಕ್ಕವರಿಗೆ ಹೊರೆಯಾಗುತ್ತಿದೆ. ನಮ್ಮಲ್ಲಿ ಕೋಲಾರ, ಬೆಂಗಳೂರು, ಮಂಡ್ಯ ಇಂತಹ ಕಡೆಗಳಲ್ಲೆಲ್ಲಾ ಪರವಾಗಿಲ್ಲ. ಆದರೆ ಟೋಟಲ್ ನ್ಯಾಷನಲೈಸ್ ಆಗಿರತಕ್ಕಂಥ ಉತ್ತರ ಕರ್ನಾಟಕದ ಭಾಗಗಳಲ್ಲಿ ಬೇರೆ ಅಲ್ಟರ್‌ನೇಟಿವ್ ಇಲ್ಲ. ವಿಶೇಷತಃ ಈ ಕೆಳಗಿನ ಜಿಲ್ಲೆಗಳನ್ನು ನಮೂದಿಸಬಹುದು. ಬೆಳಗಾಂ, ಕಾರವಾರ, ಗದಗ, ಬಿಜಾಪುರ, ಹಾವೇರಿ, ಬಾಗಲಕೋಟೆ, ಹಾಸನ, ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗ, ಬೀದರ್‌ಗಳಲ್ಲಿ, ಅಂದರೆ ಈ 11 ಜಿಲ್ಲೆಗಳಲ್ಲಿ ಯಾವ ಅಲ್ಟರ್‌ನೇಟಿವ್ ಸಿಸ್ಟಂ ಇಲ್ಲವಾಗಿದೆ. ಆದುದರಿಂದ ನಾನು ಸರಕಾರವನ್ನು ಒತ್ತಾಯ ಮಾಡುವುದೇನೆಂದರೆ, ಕೇವಲ ಒಂದು

1.00 ಪಿ.ಎಂ

ಪೈಸೆಯನ್ನು ನೀವು ಕಡಿಮೆ ಮಾಡಬೇಕು. ಈ ಬಗ್ಗೆ ಮಾನ್ಯ ಖರ್ಗೆಯವರು ನಮ್ಮ ಪರವಾಗಿ ಶಿಫಾರಸ್ಸು ಮಾಡಬೇಕು. ನೀವು ಇಲ್ಲಿ ಇದ್ದಾಗ ಧರಣಿ ಇತ್ಯಾದಿಗಳನ್ನು ಮಾಡಿ ನಮ್ಮಿಂದ 6 ಪೈಸೆಗಳನ್ನು ಕಡಿಮೆ ಮಾಡಿಸಿದ್ದೀರಿ. ನಾವು ಆಗ ನಿಮ್ಮ ವಾದವನ್ನು ಒಪ್ಪಿಕೊಂಡಿದ್ದೆವು. ಈಗ ನೀವು ಒಂದು ಪೈಸೆಯನ್ನು ಕಡಿಮೆ ಮಾಡಿ. ಇದು ನಮ್ಮಿಂದ ಸಾಧ್ಯವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:-ಮಾನ್ಯ ವಾಜಪೇಯಿಯವರು ನೀವು ಇದ್ದಾಗ ಲೀಟರ್‌ಗೆ ಒಂದು ರೂಪಾಯಿ ಏರಿಸಿದ್ದರೆ, ಈಗ ನಾಲ್ಕು ರೂಪಾಯಿಗಳಷ್ಟು ಏರಿಸಿದ್ದಾರೆ. ನಿಮ್ಮ ಮೇಲೆ ಕರುಣೆ ತೋರಿಸಿ, ಆದರೆ ನಮ್ಮ ಸರಕಾರ ಬಂದ ಮೇಲೆ 4 ರೂಪಾಯಿ ಹೆಚ್ಚಿಸಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:-ತಾವುಗಳು ಹೇಳುವ ಹಾಗೆ ನಮ್ಮ ಮೇಲೇನೂ ಅವರು ಕರುಣೆ ತೋರಿಸಿಲ್ಲ. ಆ ವಿಚಾರ ಇರಲಿ... ನಿಮ್ಮ ಬಸ್‌ಗಳಲ್ಲಿ ದಿನಕ್ಕೆ ಸುಮಾರು 70 ಲಕ್ಷಗಳಷ್ಟು ಜನರು ಪ್ರಯಾಣ ಮಾಡುತ್ತಿದ್ದಾರೆ. ಇದು ಗಂಭೀರವಾದ ವಿಚಾರವಾಗಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಆಗ್ರಹಪಡಿಸುವುದೇನೆಂದರೆ, ಒಂದು ಪೈಸೆಯನ್ನು ಕಡಿಮೆ ಮಾಡುವುದರಿಂದ ನಿಮಗೆ ಒಟ್ಟಾರೆ 10-12ಕೋಟಿ ರೂಪಾಯಿಗಳು ಕಡಿಮೆಯಾಗಬಹುದು. ಇಲ್ಲಿ 25ಲಕ್ಷ ರೂ. ಎನ್ನುವುದು ಸ್ವಲ್ಪ ಎಕ್ಸಾಜರೇಶನ್ ಇದ್ದರೂ 15 ರಿಂದ 20 ಪರ್‌ಸೆಂಟ್... ಈ ಕ್ಯಾನ್ಸಲೇಶನ್‌ನ್ನು 7 ಪರ್‌ಸೆಂಟ್‌ನಿಂದ 5 ಪರ್‌ಸೆಂಟ್‌ಗೆ, ಮಾಡಬಹುದು. ಇದು ಮುಂದಿನ 45 ದಿನಗಳಲ್ಲಿ ಮಾಡಬಹುದಾಗಿದೆ. ಹೀಗೆ ಇದೇ ಕೊನೆ ಎಂದು ನಾನು ಅಂದುಕೊಂಡಿಲ್ಲ. ಸದನದಲ್ಲಿ ಮುಂದಿನ ದಿನಗಳಲ್ಲಿ ಯಾವ ಯಾವ ದರಗಳನ್ನು ಜಾಸ್ತಿ ಮಾಡುತ್ತಾರೆ ಎಂಬ ಬಗ್ಗೆ ಮಾತನಾಡೋಣ. ಒಂದೇ ಸಾರಿ ಇಷ್ಟು ಏರಿಸುವುದು ಸರಿಯಲ್ಲ ಎಂದು ನನ್ನ ವಾದ. 20001ನೇ ಇಸವಿಯಲ್ಲಿ ನಾವು ಸಂಬಳಸಾರಿಗೆಗಳನ್ನು ರಿವೈಸ್ ಮಾಡಬೇಕಾಗುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಕೇಂದ್ರ ಸರಕಾರದವರು ನೌಕರರ ಡಿ.ಎ. ಜಾಸ್ತಿ ಮಾಡಿಕೊಂಡು ಹೋಗುತ್ತಿರುತ್ತಾರೆ. ಅದಕ್ಕೋಸ್ಕರ ನಾವು ಏರಿಕೆಯನ್ನು ಮಾಡಿಕೊಂಡು ಇಟ್ಟಿದ್ದೇವೆ ಅಂದರೆ ಅದು ಸರಿಯಲ್ಲ. ಆದುದರಿಂದ ದಯಮಾಡಿ ಒಂದು ಕಿ.ಮೀ.ಗೆ ಒಂದು ಪೈಸೆಯಷ್ಟು ಕಡಿಮೆ ಮಾಡಬೇಕೆಂದು ನಾನು ತಮ್ಮಲ್ಲಿ ಆಗ್ರಹ ಮಾಡುತ್ತೇನೆ. ನಿಲುವಳಿ ಸೂಚನೆಗೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಯವರು ಇದನ್ನು ಪರಿಶೀಲನೆ ಮಾಡಬೇಕೆಂದು ವಿನಂತಿಸಿಕೊಳುತ್ತೇನೆ. ಇಲ್ಲಿ ಲಾಜಿಕಲ್ ಆಗಿ, ಟೆಕ್ನಿಕಲ್ ಆಗಿ ಪರ್-ಕಿಲೋಮೀಟರ್‌ಗೆ ಒಂದು ಪೈಸೆ ಕಡಿಮೆ ಮಾಡಲ್ಲ ಏನೂ ತೊಂದರೆಯಾಗುವುದಿಲ್ಲ. ಇದರಿಂದ 8-10 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಬಹುದು. ಆದ್ದರಿಂದ ದಯಮಾಡಿ ಈ ಬಗ್ಗೆ ತಾವುಗಳು ಹೇಳಬೇಕು.

ಶ್ರೀ ವಿ. ಸೋಮಣ್ಣ:-ಸನ್ಮಾನ್ಯ ಸಚಿವರು ಬೆಂಗಳೂರು ನಗರದ ಬಸ್ ದರವನ್ನು ನಿಗದಿ ಮಾಡುವಾಗ 25 ಪೈಸೆ, 50 ಪೈಸೆಗಳನ್ನು ಒಮ್ಮೆಲೇ ಜಾಸ್ತಿ ಮಾಡಿದ್ದಾರೆ. ಇವರು ಸುಮಾರು 200-250 ಖಾಸಗಿ ಬಸ್‌ಗಳನ್ನು ತೆಗೆದುಕೊಂಡು ಅವುಗಳು ದಿನಕ್ಕೆ ಕೇವಲ 25-50ಕಿ.ಮೀ.ಗಳಷ್ಟು ಓಡಿದರೂ ಕೂಡ 250 ಕಿ.ಮೀ.ಗಳಷ್ಟು ಮಿನಿಮಮ್ ಕಿ.ಮೀ. ಮೊತ್ತವನ್ನು ಅಧಿಕಾರಿಗಳು ಬರೆದುಕೊಡುತ್ತಾ ಇದ್ದಾರೆ. ಬಸ್‌ನ್ನು ಓಡಿಸದೇ ಹಣವನ್ನು ಕೊಡುವ ಮೂಲಕ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿದ್ದಾರೆ. ಹೀಗೆ ಬಸ್‌ಮಾಲೀಕರಿಗೆ ಹಣ ಕೊಟ್ಟು, ಪ್ರಯಾಣಿಕರಿಗೆ ಒಮ್ಮೆಗೆ ಇಷ್ಟು ದರ ಏರಿಕೆ ಮಾಡಿದ್ದೀರಿ; ಇದು ಸರಿಯಲ್ಲ. ದಯಮಾಡಿ 1-25ರೂ. ಇದ್ದುದನ್ನು 1-00ರೂ. ಮಾಡಬೇಕು. 1-75ರೂ. ಇದ್ದುದನ್ನು 1-50ರೂ.ಎಂದು ಮಾಡಬೇಕು. ಹೀಗೆ ಸ್ವಲ್ಪ ಕಡಿಮೆ ಮಾಡಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು. ಸಂಸ್ಥೆಯಲ್ಲಿ ಇರುವ ಸೋರಿಕೆಯನ್ನು ತಡೆಗಟ್ಟಬೇಕು. ಇದರಿಂದ ಪ್ರಯಾಣಿಕರಿಗೆ ಅುಕೂಲವಾದ ರೇಟ್‌ನ್ನು ನಿಗದಿ ಮಾಡಬಹುದು. ಬೆಂಗಳೂರು ರಾಜ್ಯದ ರಾಜಧಾನಿ. ಇಲ್ಲಿ ಎಲ್ಲಾ ವರ್ಗದ ಜನರಿದ್ದಾರೆ. ಕಡು ಬಡವರು, ಮಧ್ಯಮವರ್ಗದವರು, ಕೂಲಿಕಾರ್ಮಿಕರು ಇದ್ದಾರೆ. ಹೀಗೆ ಈ ವರ್ಗದವರಿಗೆ ಅನಾನುಕೂಲವಾದ ರೀತಿಯಲ್ಲಿ ದಿಢೀರ್ ಆಗಿ ಇಷ್ಟೊಂದು ರೇಟ್‌ನ್ನು ಏರಿಸಿರತಕ್ಕಂಥಾದ್ದು ಅಷ್ಟು ಒಳ್ಳೆಯ ಕ್ರಮವಲ್ಲ. ಖಾಸಗಿ ಬಸ್‌ಗಳ ಓಡಾಡದ್ದಿರೂ ಹಣ ಪಾವತಿ ಮಾಡುತ್ತಿರುವ ಬಗ್ಗೆ ಸಚಿವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:-ಮಾನ್ಯ ಅಧ್ಯಕ್ಷರೇ, ನಾವು ಸದನವನ್ನು ಬಿಟ್ಟು, ಸಭಾತ್ಯಾಗ ಮಾಡಿ ಪತ್ರಿಕೆಗಳಲ್ಲಿ ಹಾಕಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ನಾವು ನಿಯಮಗಳ ಪ್ರಕಾರ ಸರಕಾರದೊಂದಿಗೆ ಚರ್ಚಿಸುತ್ತೇವೆ, ವಾದ ಮಾಡುತ್ತೇವೆ. ತಾವುಗಳು ನಮಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಾವು ತಮಗೆ ಕೃತಜ್ಞರಾಗಿದ್ದೇವೆ. ಮಾನ್ಯ ಸೋಮಣ್ಣನವರು ಹೇಳಿದ ವಿಚಾರ ಸರಿಯಾಗಿದೆ. ಖಾಸಗಿ ಬಸ್‌ಗಳ ಬಗ್ಗೆ ಅಧಿಕಾರಿಗಳು ಗಮನ ಕೊಡುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಇದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ನೀವು ಕಿ.ಮೀ.ಗೆ ಒಂದು ಪೈಸೆಯಷ್ಟು ಕಡಿಮೆ ಮಾಡುವುದರಿಂದ ಜನಸಾಮಾನ್ಯರಿಗೆ, ಬಡವರಿಗೆ ತುಂಬಾ ಅನುಕೂಲವಾಗುತ್ತದೆ. ಕೂಲಿ ಮಾಡುವ ಜನರಿಗೆ ಇದರಿಂದ ತುಂಬಾ ಕಷ್ಟವಾಗಿದೆ. ಹಿಂದೆ ಕೂಲಿ ಮಾಡುವ ಜನರು ಬಸ್‌ಗಳಲ್ಲಿ ಹೋಗುತ್ತಿರಲಿಲ್ಲ. ಈಗ ಅವರು ಒಂದು ಹೋಬಳಿ ಇಂದ ಒಂದು ಹೋಬಳಿಗೆ ಹೋಗುತ್ತಿದ್ದಾರೆ. ನಗರದಲ್ಲಿಯೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕೂಲಿಗಾಗಿ ಹೋಗುತ್ತಿರುತ್ತಾರೆ. ಹೀಗಾಗಿ ಒಂದು ಪೈಸೆ ಕಡಿಮೆ ಮಾಡುವುದು ಕಷ್ಟಸಾಧ್ಯವೇನೂ ಇಲ್ಲ. ಇದನ್ನು ಅಧಿಕಾರಿಗಳು ಕೂಡ ಒಪ್ಪುತ್ತಾರೆ ದಯವಿಟ್ಟು ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:-ಮಾನ್ಯ ಅಧ್ಯಕ್ಷರೇ, ನಗರದಲ್ಲಿ 1-75 ಇದ್ದುದನ್ನು 2-00ರೂ. ಮಾಡಿದ್ದಾರೆ. ಆದರೆ ನಾವು ಸಬರ್‌ಬರ್ನ್‌ಗೆ ಬಂದಿರುವುದರಿಂದ ಇಲ್ಲಿ 2500 ಶೆಡ್ಯೂಲ್‌ಗಳನ್ನು ದಿನವೂ ಅಪರೇಟ್ ಮಾಡುತ್ತಾರೆ. ಇದರ ಮೂಲಕ 25 ಲಕ್ಷ ಜನರು ಬಸ್‌ಗಳಲ್ಲಿ ದಿನವೂ ಪ್ರಯಾಣಿಸುತ್ತಾರೆ. ಇದು ನಗರ ಪ್ರದೇಶದ ಮಾತು. ಹಾಗಾಗಿ ನಿಮ್ಮ ಈ ದರವು ಪ್ರಮಾಣಿಕರಿಗೆ ಬಹಳ ಹೊರೆಯಾಗುತ್ತದೆ; ಅದೇ ರೀತಿಯಲ್ಲಿ 2-25ರೂ.ಇದ್ದುದನ್ನು 3-00ರೂ. ಮಾಡಿದ್ದಾರೆ. ಇದು ಸರಿಯಲ್ಲ. ಅದನ್ನು 2-50ರೂ. ಮಾಡಬೇಕು. ಹೀಗೆ ಸ್ವಲ್ಪ ಬದಲಾವಣೆ ಮಾಡುವುದರಿಂದ ಜನರಿಗೆ ಸ್ವಲ್ಪ ರಿಲೀಫ್ ಸಿಗುವಂತೆ ಮಾಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಪಿ.ಆರ್. ಸಗೀರ್ ಅಹಮದ್(ಸನ್ಮಾನ್ಯ ಸಾರಿಗೆ ಸಚಿವರು):-ಮಾನ್ಯ ಅಧ್ಯಕ್ಷರೇ, ಮಾಜಿ ಸಾರಿಗೆ ಸಚಿವರಾದಂಥ ಮಾನ್ಯ ಸಿಂಧ್ಯಾರವರು, ಬಚ್ಚೇಗೌಡರವರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:-ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಪಕ್ಷಗಳ ನಾಯಕರು ಗಳವರು ಬಸ್ ದರ ಏರಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದಕ್ಕೆ ಸಂಬಂಧಪಟ್ಟ ಸಚಿವರು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರುಗಳು ಕೊಟ್ಟ ಸಲಹೆಗಳನ್ನು ಮುಂದಿನ ದಿನಗಳಲ್ಲಿ ಪರಿಶೀಲಿಸಿ, ಅಳವಡಿಸಿಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಹೇಳಿರುವುದರಿಂದ ಹಾಗೂ ಮುಂದೆ ನಾನು ನಿಲುವಳಿ ಸೂಚನೆಗೆ ಪರ್ಮಿಶನ್ ಕೊಟ್ಟರೂ ಕೂಡ, ಆಗ ಏನು ಮಾತನಾಡಬೇಕೋ, ಆ ಮಾತುಗಳೆಲ್ಲವನ್ನೂ ತಾವುಗಳು ಈಗ ಮಾತನಾಡಿದ್ದೀರಿ. ಅದಕ್ಕೆ ಸಚಿವರೂ ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಆದುದರಿಂದ ಸೂಚನೆಗೆ ಪರ್ಮಿಶನ್ ಕೊಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಈ ನಿಲುವಳಿ ಸೂಚನೆಯನ್ನು ನಾನು ನಿರಾಕರಿಸುತ್ತೇನೆ. ಮುಂದೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯು 1-30 ಘಂಟೆಯವರೆಗೆ ನಡೆಯುತ್ತದೆ. 1-30 ರಿಂದ 2-30ರ ವರೆಗೆ ಲಂಚ್ ಅವರ್. 2-30 ರಿಂದ 6-30ರ ವರೆಗೆ ಚರ್ಚೆ ನಡೆಯುತ್ತದೆ. ಇನ್ನೂ 30 ಜನರು ಮಾತನಾಡುವವರು ಇದ್ದಾರೆ. ಸರಕಾರದವರು ನಾಳೆ ಮಧ್ಯಾಹ್ನ 3-00 ಘಂಟೆಗೆ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್:-ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೇವೆ. ತಾವುಗಳು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:- ತಮ್ಮ ನೋಟೀಸ್‌ನ್ನು ಪರಿಶೀಲಿಸಿ ನಾಳೆ ಅವಕಾಶವನ್ನು ಮಾಡಿಕೊಡುತ್ತೇನೆ.